# ನವ ಉದಾರವಾದ: ಜಗತ್ತನ್ನು ನುಂಗಿದ ಒಂದು ಕಲ್ಪನೆ

*ನವ ಉದಾರವಾದ ಎಂಬ ಪರಿಕಲ್ಪನೆಯು ಇಂದು ಒಂದು ರೀತಿಯ ವಾಗಾಡಂಬರದ ಸಾಧನವಾಗಿ ಬದಲಾಗಿದೆ. ಆದರೆ ಇದು ನಮ್ಮ ಯುಗದ ಆಳವಾದ ಸಿದ್ಧಾಂತವನ್ನು ಸೂಕ್ತ ರೀತಿಯಲ್ಲಿ ಹೆಸರಿಸುತ್ತದೆ – ಇದು ಮಾರುಕಟ್ಟೆಯ ತರ್ಕವನ್ನು ಗೌರವಿಸುವ ಮತ್ತು ನಮ್ಮನ್ನು ಮನುಷ್ಯರನ್ನಾಗಿ ಮಾಡುವಂತಹ ಸಂಗತಿಗಳನ್ನು ಹೊರ ತೆಗೆಯುತ್ತದೆ.*

ಇತ್ತೀಚೆಗೆ ಅಂತರರಾಷ್ಟ್ರೀಯ ಹಣಕಾಸಿನ ನಿಧಿಯ ವೇದಿಕೆಯಲ್ಲಿ ನವ ಉದಾರವಾದದ ಮೇಲೆ ಸುಧೀರ್ಘವಾದ ಚರ್ಚೆ ನಡೆಸಿದ ಸಂಶೋಧಕರು ಉದಾರವಾದದ ಅಸ್ತಿತ್ವವನ್ನು ಒಪ್ಪಿಕೊಂಡಿದ್ದಾರೆ. ಯಾವತ್ತೂ ಅಜಾಗರೂಕವಾಗಿರದ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯ ಮೂರು ಜನ ಹಿರಿಯ ಅರ್ಥಶಾಸ್ತ್ರಜ್ಞರು ನವ ಉದಾರವಾದದ ಪ್ರಯೋಜನಗಳನ್ನು ಪ್ರಶ್ನಿಸುವ ಒಂದು ಪತ್ರಿಕೆಯನ್ನು ಪ್ರಕಟಿಸಿದರು. ಈ ಪದವು ಬರಿಯ ರಾಜಕೀಯ ಕಳಂಕವಾಗಿದೆ ಅಥವಾ ಯಾವುದೇ ವಿಶ್ಲೇಷಣಾತ್ಮಕ ಶಕ್ತಿ ಇಲ್ಲದಿರುವ ಒಂದು ಕಲ್ಪನೆಯಾಗಿದೆ ಎಂದು ಪ್ರತಿಪಾದಿಸುವ ಮೂಲಕ ಆ ವಿಚಾರಕ್ಕೊಂದು ನಿಲುಗಡೆಯನ್ನು ಕೊಟ್ಟರು. ಜಗತ್ತಿನಾದ್ಯಂತ ಆರ್ಥಿಕತೆಗಳ ಮೇಲಿನ ನಿಯಂತ್ರಣ ತೆಗೆದು ಹಾಕುವುದನ್ನು ಪ್ರೋತ್ಸಾಹಿಸುವ, ವ್ಯಾಪಾರ ವಹಿವಾಟನ್ನು ನಡೆಸಲು ಮತ್ತು ಬಂಡವಾಳಕ್ಕಾಗಿ ಮುಕ್ತ ರಾಷ್ಟ್ರೀಯ ಮಾರುಕಟ್ಟೆಯ ಮೇಲೆ ಒತ್ತಾಯ ಹೇರುವ, ಹಾಗೂ ಸರ್ಕಾರಗಳು ಬಿಗು ಕ್ರಮ ಅಥವಾ ಖಾಸಗೀಕರಣದ ಮೂಲಕ ಕುಗ್ಗುತ್ತವೆ ಎಂಬ ತಗಾದೆ ಮಾಡುವ ಒಂದು "ನವ ಉದಾರವಾದದ ಕಾರ್ಯಸೂಚಿ"ಯನ್ನು ಈ ಲೇಖನವು ನಯವಾಗಿ ಟೀಕಿಸುತ್ತದೆ. 1980 ರಿಂದಲೂ ಜಗತ್ತಿನಲ್ಲಿ ನವ ಉದಾರವಾದದ ನೀತಿಗಳು ಹರಡುತ್ತ ಬಂದಿರುವುದಕ್ಕೆ ಮತ್ತು **ಕುಂಠಿತ** ಬೆಳವಣಿಗೆ, ವ್ಯಾಪಾರ ಚಕ್ರಗಳ ಏರಿಳಿತಗಳು, ಹಾಗು ಅಸಮಾನತೆಗಳೊಂದಿಗೆ ನವ ಉದಾರವಾದಿ ನೀತಿಗಳಿಗೆ ಇರುವ ಪರಸ್ಪರ ಸಂಬಂಧಕ್ಕೆ ಇದರ ಲೇಖಕರು ಅಂಕಿಅಂಶಗಳ ಮೂಲಕ ಪುರಾವೆಗಳನ್ನು ನೀಡುತ್ತಾರೆ.

ನವ ಉದಾರವಾದ ಎಂಬ ಪದವು 1930ರ ದಶಕದಿಂದಲೂ ಜಾರಿಯಲ್ಲಿರುವ ಹಳೆಯ ಶಬ್ದವಾಗಿದೆ, ಆದರೆ ಇದು ಈಗ ನಮ್ಮ ಪ್ರಸ್ತುತ ರಾಜಕೀಯವನ್ನು ವಿವರಿಸುವ, ನಿಖರವಾಗಿ ಹೇಳಬೇಕೆಂದರೆ ನಮ್ಮ ರಾಜಕೀಯವು ಅನುಮತಿಸಿರುವ ಚಿಂತನಾ ಧಾರೆಗಳನ್ನು ಮಾರ್ಗವಾಗಿ ಪುನಶ್ಚೇತನಗೊಂಡಿದೆ. 2008ರ ಹಣಕಾಸಿನ ಬಿಕ್ಕಟ್ಟಿನ ನಂತರದ ಆರ್ಥಿಕ ಕುಸಿತಕ್ಕೆ ಯಾವುದೇ ರಾಜಕೀಯ ಪಕ್ಷಕ್ಕಲ್ಲದೆ, ತನ್ನ ಅಧಿಕಾರವನ್ನು ಮಾರುಕಟ್ಟೆಯ ಹಿಡಿತಕ್ಕೆ ಬಿಟ್ಟುಕೊಟ್ಟ ಸಂಸ್ಥೆಯ ಮೇಲೆ ಹೊಣೆಗಾರಿಕೆಯನ್ನು ಕಲ್ಪಿಸುವ ಒಂದು ಮಾರ್ಗವಾಗಿ ಈ ಪರಿಕಲ್ಪನೆಯು ಹೊರಹೊಮ್ಮಿದೆ. ಅಮೇರಿಕಾದ ಡೆಮೋಕ್ರೇಟ್ಸ್ ಮತ್ತು ಇಂಗ್ಲೆಂಡಿನ ಲೇಬರ್ ಪಕ್ಷಗಳು ಈ ವಿನಾಯತಿಯನ್ನು ದ್ರೋಹ ಎಂದು ಚಿತ್ರಿಸಿದವು. ಏಕೆಂದರೆ ಜಾಗತಿಕ ಹಣಕಾಸಿನ ಸಂಸ್ಥೆಗಳು ಮತ್ತು ಸ್ವಯಂ ಸೇವಾ ನೀತಿಗಳಿಂದ ಪ್ರೇರಿತರಾದ ಬಿಲ್ ಕ್ಲಿಂಟನ್ ಮತ್ತು ಟೋನಿಬ್ಲೇರ್ ರವರು ಎಡಪಕ್ಷದವರ ಸಾಂಪ್ರದಾಯಿಕ ಬದ್ಧತೆಗಳನ್ನು ಕೈಬಿಟ್ಟರು ಎಂದು ಹೇಳಲಾಯಿತು, ವಿಶೇಷವಾಗಿ ಕಾರ್ಮಿಕರಿಗೆ ಸಂಬಂಧಿಸಿದಂತೆ ಅಸಮಾನತೆಯು ಮತ್ತಷ್ಟು ಹೆಚ್ಚಾಗಿದೆ ಎಂದು ನಿರೂಪಿಸಲಾಯಿತು.

ಕಳೆದ ಕೆಲವು ವರ್ಷಗಳಿಂದ, ನವ ಉದಾರವಾದದ ಬಗೆಗಿನ ಚರ್ಚೆಗಳು ವಿಪರೀತ ಹೊಲಸಾಗುತ್ತಿದ್ದು, ಯಾರಾದರೂ ಒಂದು ಇಂಚು ಬಲದ ಕಡೆ ಸರಿದರೂ ಅವರ ಮೇಲೆ ಆಪಾದನೆಗಳನ್ನು ಹೇರಲು ಎಡದಲ್ಲಿದ್ದವರಿಗೆ ಒಂದು

ವಾಕ್ಚಾತುರ್ಯದ ಸಾಧನವಾಗಿ ಮಾರ್ಪಟ್ಟಿದೆ. (ಇದೊಂದು ಅರ್ಥಹೀನ ಅವಮಾನವೆಂದು ನಡುಪಂಥೀಯರು ಹೇಳುವುದರಲ್ಲಿ ಆಶ್ಚರ್ಯವೇನಿಲ್ಲ: ಅವರೇ ಕೊನೆಗೆ ಅರ್ಥಪೂರ್ಣವಾಗಿ ಅವಮಾನಿತರಾಗುವುದು). ಆದರೆ "ನವ ಉದಾರವಾದ" ಎನ್ನುವುದು ಒಂದು ಸಕಾರಾತ್ಮಕವಾದ, ನ್ಯಾಯಸಮ್ಮತವಾದ ಸಾಮರಸ್ಯಕ್ಕಿಂತ ಹೆಚ್ಚಿನದ್ದಾಗಿದೆ. ಇದು ಸಹಜವಾಗಿ ತನ್ನದೇ ಆದ ರೀತಿಯಲ್ಲಿ ಒಂದು ಜೋಡಿ ಕನ್ನಡಕವಾಗಿದೆ ಎಂದು ಹೇಳಬಹುದು.

ಥ್ಯಾಚರ್ ಮತ್ತು ರೇಗನ್ ಅವರಿಂದ ಹೆಚ್ಚು ಮೆಚ್ಚುಗೆಗೆ ಪಾತ್ರವಾಗಿದ್ದ ರಾಜಕೀಯ ಚಿಂತಕರು ಹೇಗೆ ಸಮಾಜದ ಆದರ್ಶವನ್ನು ಒಂದು ಸಾರ್ವತ್ರಿಕ ಮಾರುಕಟ್ಟೆಯಂತೆ (ಮತ್ತು, ಉದಾಹರಣೆಗೆ, ಒಂದು ನಗರ–ರಾಜ್ಯ, ನಾಗರಿಕ ಕ್ಷೇತ್ರ ಅಥವಾ ಒಂದು ರೀತಿಯ ಕುಟುಂಬದಂತಲ್ಲ) ಹಾಗೂ ಮಾನವರ ಲಾಭ ಮತ್ತು ನಷ್ಟದ ಗಣಕಯಂತ್ರಗಳಂತೆ (ಅನುಗ್ರಹದ ಧಾರಕರಲ್ಲ ಅಥವಾ ಪರಭಾರೆ ಮಾಡಲಾಗದಂತಹ ಹಕ್ಕುಗಳು ಮತ್ತು ಕರ್ತವ್ಯಗಳಲ್ಲ) ರೂಪಿಸಲು ಅವರಿಗೆ ಸಹಾಯ ಮಾಡಿದರು ಎಂಬುದನ್ನು ನೀವು ಹೆಚ್ಚು ಸ್ಪಷ್ಟವಾಗಿ ನವ ಉದಾರವಾದದ ಮಸೂರದ ಮೂಲಕ ಇಣುಕಿ ನೋಡಬಹುದು. ಖಂಡಿತವಾಗಿ ಇದು ಕಲ್ಯಾಣ ರಾಜ್ಯವನ್ನು ಮತ್ತು ಪೂರ್ಣ ಉದ್ಯೋಗದ ಯಾವುದೇ ಬದ್ಧತೆಯನ್ನು ದುರ್ಬಲಗೊಳಿಸುವ ಹಾಗೂ ಯಾವಾಗಲೂ – ತೆರಿಗೆಯನ್ನು ಕಡಿತಗೊಳಿಸುವ ಮತ್ತು ಅನಿಯಂತ್ರಿತಗೊಳಿಸುವ ಗುರಿಯನ್ನು ಹೊಂದಿದೆ. ಆದರೆ ನವ ಉದಾರವಾದವು ಬಲಪಂಥೀಯರ ಒಂದು ಸಾಮಾನ್ಯ ಆಶಯ ಪಟ್ಟಿಗಿಂತ ಹೆಚ್ಚಿನದನ್ನು ಸೂಚಿಸುತ್ತದೆ. ಇದು ಸಾಮಾಜಿಕ ನೈಜತೆಯನ್ನು ಮರುಕ್ರಮಗೊಳಿಸುವ, ವ್ಯಕ್ತಿಗಳಾಗಿ **ನಮ್ಮ ಸ್ಥಿತಿಯನ್ನು** ಪುನರ್ವಿಮರ್ಶಿಸುವ ಒಂದು ಮಾರ್ಗವಾಗಿತ್ತು.

ಹಾಗಿದ್ದರೂ, ಉದಾರವಾದದ ಮಸೂರದ ಮೂಲಕ ನೋಡಿದರೆ ಕಲ್ಯಾಣ ರಾಷ್ಟ್ರಕ್ಕಿಂತ ಕಡಿಮೆಯಲ್ಲದ ಮುಕ್ತ ಮಾರುಕಟ್ಟೆಯು ಮಾನವನ ಆವಿಷ್ಕಾರ ಎಂಬುದು ಗೋಚರವಾಗುತ್ತದೆ. ಈಗ ನೋಡುತ್ತೀರಿ, ಎಲ್ಲಾ ಕಡೆಯೂ ಕಾಣುವ ಹಾಗೆ ನಮ್ಮ ಪ್ರತಿಭೆ ಮತ್ತು ಉಪಕ್ರಮಗಳ ಮಾಲೀಕರು ನಾವೇ ಎಂದು ನಮ್ಮಷ್ಟಕ್ಕೆ ನಾವು ಯೋಚಿಸುತ್ತಿದ್ದೇವೆ, ಎಷ್ಟು ಸರಾಗವಾಗಿ ನಮಗೆ ಸ್ಪರ್ಧಿಸಲು ಮತ್ತು ಹೊಂದಿಕೊಳ್ಳಲು ಹೇಳಲಾಗುತ್ತದೆ. ಹೇಗೆ ಸರಕು ಮಾರುಕಟ್ಟೆಗಳನ್ನು ಸರಳವಾಗಿ ವಿವರಿಸಲು ಹಿಂದೆ ಚಾಲ್ತಿಯಲ್ಲಿದ್ದ ಭಾಷೆಯು (ಸ್ಪರ್ಧೆ, ಪರಿಪೂರ್ಣ ಮಾಹಿತಿ, ತರ್ಕಬದ್ಧ ನಡವಳಿಕೆ) ಇಂದು ಸಮಾಜದ ಎಲ್ಲ ಸಂಗತಿಗಳಿಗೂ ಅನ್ವಯವಾಗುತ್ತಿದೆ, ಎಷ್ಟರಮಟ್ಟಿಗೆ ಎಂದರೆ ಅದು ನಮ್ಮ ವೈಯಕ್ತಿಕ ಜೀವನದ ಸ್ಥೈರ್ಯವನ್ನು ಆಕ್ರಮಿಸಿಕೊಳ್ಳುವಲ್ಲಿಯವರೆಗೆ ಅನ್ವಯವಾಗುತ್ತಿದೆ, ಮತ್ತು ಮಾರಾಟಗಾರನ ವರ್ತನೆಯು ಹೇಗೆ ಸ್ವಯಂ ಅಭಿವ್ಯಕ್ತಿಯ ಎಲ್ಲಾ ವಿಧಾನಗಳಲ್ಲಿ ಪ್ರಭಾವ ಬೀರಿದೆ ಎನ್ನುವದನ್ನು ಕೂಡಾ ನೀವು ನೋಡುತ್ತೀರಿ.

ಸಂಕ್ಷಿಪ್ತವಾಗಿ ಹೇಳುವುದಾದರೆ, "ನವ ಉದಾರವಾದವು" ಕೇವಲ ಮಾರುಕಟ್ಟೆಯ ಪರವಾದ ನೀತಿಗಳನ್ನು ಬೆಂಬಲಿಸುತ್ತದೆ ಎಂಬುದಕ್ಕಾಗಿ ಮಾತ್ರ ಅಥವಾ ಸಾಮಾಜಿಕ ಪ್ರಜಾಪ್ರಭುತ್ವದ ಪಕ್ಷಗಳ ದೌರ್ಬಲ್ಯದಿಂದಾಗಿ ರಚಿಸಲ್ಪಟ್ಟ ಹಣಕಾಸು ಬಂಡವಾಳಶಾಹಿ ಜೊತೆಯ ಹೊಂದಾಣಿಕೆಗಳಿಗೆ ಮಾತ್ರ ಹೆಸರಾಗಿಲ್ಲ. ಅದಕ್ಕೆ ಬದಲಾಗಿ ಇದು ಸದ್ದಿಲ್ಲದೆ ನಾವು ಆಚರಿಸುವ ಮತ್ತು ನಂಬಿರುವ ಎಲ್ಲವನ್ನೂ ನಿಯಂತ್ರಿಸುತ್ತ ಬಂದ ಮತ್ತು ಸ್ಪರ್ಧೆಯೊಂದೇ ಮಾನವ ಚಟುವಟಿಕೆಗಳನ್ನು ಸಂಘಟಿಸುವ ಏಕೈಕ ನ್ಯಾಯಬದ್ಧ ತತ್ವವಾಗಿದೆ ಎಂದು ನಂಬುವ ಒಂದು ಪೂರ್ವ ಸಿದ್ಧಾಂತವಾಗಿದೆ.

ನವ ಉದಾರವಾದವು ವಾಸ್ತವವೆಂದು ಪ್ರಮಾಣೀಕೃತಗೊಂಡ ತಕ್ಷಣ, ಹಾಗೂ ಮಾರುಕಟ್ಟೆಯ ಸಾರ್ವತ್ರಿಕ ಆಷಾಢಭೂತಿತನವನ್ನು ಅದು ಸ್ಪಷ್ಟಗೊಳಿಸಿದ ತಕ್ಷಣ ಜನಪರವಾದಿಗಳು ಮತ್ತು ನಿರಂಕುಶ ಪ್ರಭುತ್ವವಾದಿಗಳೂ ಅಧಿಕಾರಕ್ಕೆ ಬಂದರು. ಅಮೇರಿಕದಲ್ಲಿ ನವ ಉದಾರವಾದದ ಬದ್ಧ–ದ್ವೇಷಿಯಾದ ಹಿಲರಿ ಕ್ಲಿಂಟನ್‌ರವರು ತಮ್ಮ ಅಧಿಕಾರವನ್ನು

ಕಳೆದುಕೊಂಡರು, ಮತ್ತು ತಾನು ಮುಕ್ತ ವ್ಯಾಪಾರವನ್ನು ದ್ವೇಷಿಸುತ್ತಿರುವವನು ಎಂಬಂತೆ ನಟಿಸಲು ಗೊತ್ತಿದ್ದವನೊಬ್ಬ ಅಧಿಕಾರಕ್ಕೆ ಬಂದ. ಇಲ್ಲಿಯವರೆಗೂ ಬಳಸುತ್ತಿದ್ದ ಕನ್ನಡಕ ಇದೀಗ ನಿಷ್ಪ್ರಯೋಜಕವಾಯಿತಾ? ಬ್ರಿಟಿಷ್ ಮತ್ತು ಅಮೆರಿಕಾದ ನಡುವಿನ ರಾಜಕೀಯದಲ್ಲಿನ ಬಿರುಕನ್ನು ಅರ್ಥಮಾಡಿಕೊಳ್ಳಲು ನಮಗೆ ಅವರು ಏನಾದರೂ ಸಹಾಯ ಮಾಡಬಲ್ಲರೆ? ಇಂದು ಜಾಗತಿಕ ಏಕೀಕರಣದ ಶಕ್ತಿಗಳ ವಿರುದ್ಧ ರಾಷ್ಟ್ರೀಯತೆಯ ಅನನ್ಯತೆಯನ್ನು ಮರುಸೃಷ್ಟಿಸಲಾಗುತ್ತಿದೆ, ಸಾಧ್ಯವಾದಷ್ಟೂ ಅಪರಿಷ್ಕೃತ ಪರಿಭಾಷೆಯಲ್ಲಿ. ಬ್ರಿಟನ್ನಿನ ಬ್ರೆಕ್ಸಿಟ್ ಮತ್ತು ಅಮೆರಿಕದ ಟ್ರಂಪಿಸ್ಟ್ ಉಗ್ರಗಾಮಿ ಪ್ರಾಂತೀಯತೆಯೊಂದಿಗೆ ನವ ಉದಾರವಾದಿ ತರ್ಕಕ್ಕೆ ಏನು ಸಂಬಂಧವಿದೆ? ಸ್ವೇಚ್ಛಾವರ್ತಿ ಮೂರ್ಖನೆಂದು ಕರೆಯಲ್ಪಡುವ ಅಧ್ಯಕ್ಷ ಹಾಗೂ ಉಚಿತ ಮಾರುಕಟ್ಟೆ ಎಂದು ಕರೆಯಲ್ಪಡುವ ದಕ್ಷತೆಯ ರಕ್ತರಹಿತ ಮಾದರಿಯ ನಡುವೆ ಯಾವ ಸಂಭವನೀಯ ಸಂಬಂಧವಿದೆ?

ಮುಕ್ತ ಮಾರುಕಟ್ಟೆಯು ಗೆದ್ದವರ ಸಣ್ಣ ಪಡೆಯನ್ನು ಮತ್ತು ಸೋತವರ ದೊಡ್ಡ ಸೇನೆಯನ್ನು ತಯಾರಿಸುವುದು ಮಾತ್ರವಲ್ಲದೆ, ಸೋತವರು ಸೇಡು ತೀರಿಸಿಕೊಳ್ಳಲು ಬ್ರೆಕ್ಸಿಟ್ ಮತ್ತು ಟ್ರಂಪ್‌ರವರ ಕಡೆ ತಿರುಗಿದ್ದಾರೆ. ಆರಂಭದಿಂದಲೂ, ಮುಕ್ತ ಮಾರುಕಟ್ಟೆಯ ಕಾಲ್ಪನಿಕ ಸ್ವರ್ಗ ಮತ್ತು ನಾವಿರುವ ವರ್ತಮಾನದ ಕಾಲ್ಪನಿಕ ನರಕದ ನಡುವೆ; ಹಾಗೂ ಸ್ವಾತಂತ್ರ್ಯದ ರಕ್ಷಕನಾಗಿ ಮೌಲ್ಯಗಳನ್ನು ವಿಶಿಷ್ಟವಾಗಿ ಬಯಲು ಮಾಡುವ ಮಾರುಕಟ್ಟೆ ಮತ್ತು ವಸ್ತುನಿಷ್ಠತೆಗಿಂತ ವ್ಯಕ್ತಿನಿಷ್ಠ ಭಾವಗಳೇ ಹೆಚ್ಚಾಗಿ ಚಲಾವಣೆಯಾಗುವ ಸತ್ಯಾನಂತರದ (post-truth) ಅನುದಾರವಾದಿ ವರ್ತಮಾನದ ನಡುವೆ ಯಾರೂ ತಪ್ಪಿಸಲಾಗದ ಸಂಬಂಧವಿದೆ.

ನವ ಉದಾರವಾದದ ಬಗೆಗಿನ ಹಳಸಲು ಚರ್ಚೆಯನ್ನೇ ಮುಂದುವರಿಸುವುದಾದರೆ ಅದರೊಂದಿಗೆ ಮತ್ತೇನೇನು ಸೇರಿಕೊಂಡಿವೆ ಎಂಬುದರ ಹೊರತಾಗಿಯೂ, ನಮ್ಮೆಲ್ಲರ ಮೇಲೆ ಅದರ ಸಂಚಿತ ಪರಿಣಾಮ ಏನಾಗುವುದು ಎಂಬುದರ ಒಂದು ಗಂಭೀರ ಚರ್ಚೆಯೊಂದಿಗೆ ಅದನ್ನು ಆರಂಭಿಸಬೇಕು ಎಂದು ನಾನು ಯೋಚಿಸುತ್ತೇನೆ. ಹಾಗೂ ಅದಕ್ಕಾಗಿ ಅದರ ಮೂಲಕ್ಕೆ ಮರಳುವ ಅಗತ್ಯವಿದೆ, ಇದಕ್ಕೂ ಬಿಲ್ ಕ್ಲಿಂಟನ್ ಅಥವಾ ಹಿಲರಿ ಕ್ಲಿಂಟನ್ ಅವರಿಗೂ ಯಾವ ಸಂಬಂಧವಿಲ್ಲ. ಅಲ್ಲಿ ಒಮ್ಮೆ ತಮ್ಮನ್ನು ತಾವು ನವ ಉದಾರವಾದಿಗಳು ಎಂದು ಕರೆದುಕೊಳ್ಳುವ ಜನರ ಗುಂಪೊಂದು ಇತ್ತು ಮತ್ತು ಅವರು ಇದನ್ನು ಹೆಮ್ಮೆಯಿಂದ ಹೇಳುತ್ತಿದ್ದರು, ಮತ್ತು ಚಿಂತನೆಯಲ್ಲಿ ಸಂಪೂರ್ಣ ಕ್ರಾಂತಿ ಮಾಡುವುದು ಅವರ ಮಹತ್ವಾಕಾಂಕ್ಷೆಯಾಗಿತ್ತು. ಆದರೆ ಅವರಲ್ಲಿ ಪ್ರಮುಖರಾದ ಫ್ರೀಡ್ರಿಕ್ ಹಯಾಕ್ ಅವರು ತಾವು ರಾಜಕೀಯದ ರೋಹಿತದಲ್ಲಿ ತಮ್ಮದೇ ಸ್ವಂತದ ಸ್ಥಾನವನ್ನು ಸ್ಥಾಪಿಸುತ್ತಿದ್ದೇನೆ ಎಂದಾಗಲೀ, ಅಥವಾ ಬೆಪ್ಪ ಶ್ರೀಮಂತರ ಸಲುವಾಗಿ ನೆಪಗಳನ್ನು ಕೊಡುತ್ತಿದ್ದೇನೆ ಎಂದಾಗಲೀ, ಅಥವಾ ಸೂಕ್ಷ್ಮ ಅರ್ಥಶಾಸ್ತ್ರದ ಅಂಚುಗಳ ಮೇಲೆ ಕಲಾಯಿ ಹಾಕುತ್ತಿದ್ದೇನೆ ಎಂದಾಗಲೀ ಭಾವಿಸಲಿಲ್ಲ.

ಹಯಾಕ್ ಅವರು ತಾವು ಆಧುನಿಕತೆಯ ಸಮಸ್ಯೆಯನ್ನು, ವಸ್ತುನಿಷ್ಠ ಜ್ಞಾನದ ಸಮಸ್ಯೆಯನ್ನು ಬಗೆಹರಿಸುತ್ತಿದ್ದೇನೆ ಎಂದು ಭಾವಿಸಿದ್ದರು. ಹಯಾಕ್‌ರವರಿಗೆ ಮಾರುಕಟ್ಟೆಯು ಕೇವಲ ಸರಕು ಮತ್ತು ಸೇವೆಗಳ ವ್ಯಾಪಾರವನ್ನು ಮಾತ್ರ ಸುಗಮಗೊಳಿಸಲಿಲ್ಲ; ಅದು ಸತ್ಯವನ್ನು ಬಹಿರಂಗ ಪಡಿಸಿತು. ಆದರೆ ಅವರ ಮಹತ್ವಾಕಾಂಕ್ಷೆಯು ಹೇಗೆ ಅದರ ವಿರುದ್ಧದ ಸಾಧ್ಯತೆಯತ್ತ ಕುಸಿಯಿತು –ಅವರ ಮನಸ್ಸನ್ನು ಬದಲಾಯಿಸುವ ಸಾಧ್ಯತೆ ಹೇಗೆ ಉಂಟಾಯಿತು? ಅದಕ್ಕೆ ಮುಕ್ತ ಮಾರುಕಟ್ಟೆಯ ಬಗೆಗಿನ ನಮ್ಮ ವಿವೇಕಹೀನ ಶ್ರದ್ಧೆಗೆ ಧನ್ಯವಾದಗಳನ್ನು ಅರ್ಪಿಸಬೇಕು, ಒಟ್ಟಾರೆ ಸಾರ್ವಜನಿಕ ಜೀವನದಿಂದ ಸತ್ಯವನ್ನು ಹೊರದೂಡಲಾಗುವುದೆ?

1936ರಲ್ಲಿ ಯಾವಾಗ ಈ ರೀತಿಯ ಕಲ್ಪನೆ ಫ್ರೀಡ್ರಿಕ್ ಹಯಾಕ್‌ರಲ್ಲಿ ಉಂಟಾಯಿತೊ, ಆಗ, "ಹಠಾತ್ ಬೆಳಕಿನ" ಒಂದು ಗಾಢನಂಬಿಕೆಯೊಂದಿಗೆ ತಮಗೆ ಏನೋ ಹೊಸದು ಹೊಳೆಯಿತು ಎಂಬುದು ಅವರಿಗೆ ಗೊತ್ತಾಯಿತು. "ವಿಭಿನ್ನ ಮನಸ್ಸುಗಳಲ್ಲಿರುವ ಜ್ಞಾನದ ತುಣುಕುಗಳ ಸಂಯೋಜನೆಯು ಹೇಗೆ ಫಲಿತಾಂಶಗಳನ್ನು ತರುತ್ತದೆ, ಒಂದು ವೇಳೆ ಯಾರೇ ಆದರೂ ಅದನ್ನು ಉದ್ದೇಶಪೂರ್ವಕವಾಗಿ ತರುವುದಾದರೆ, ಮನಸ್ಸಿಗೆ ಮಾರ್ಗದರ್ಶನ ಮಾಡುವ ಜ್ಞಾನವೊಂದರ ಅಗತ್ಯವಿರುವಾಗ, ಅದನ್ನು ಯಾರೋ ಒಬ್ಬ ವ್ಯಕ್ತಿ ಹೊಂದಿರದೇ ಇದ್ದಾಗ?" ಎಂದು ಅವರು ಬರೆದರು.

ಇದು ಕೇವಲ ಬಡ್ಡಿದರಗಳು ಅಥವಾ ಹಣದುಬ್ಬರವಿಳಿತದ ಕುಸಿತಗಳಿಗೆ ಸಂಬಂಧಿಸಿದ ತಾಂತ್ರಿಕ ಅಂಶವಲ್ಲ. ಇದು ಸಾಂಘಿಕ ಸಮಾಜವಾದ ಅಥವಾ ಕಲ್ಯಾಣ ರಾಜ್ಯದ ವಿರುದ್ಧವಾದ ಪ್ರತಿಗಾಮಿ ವಿವಾದವಲ್ಲ. ಇದು ಹೊಸ ಪ್ರಪಂಚವನ್ನು ಸೃಷ್ಟಿಸುವ ಒಂದು ಮಾರ್ಗವಾಗಿತ್ತು. ಮಾರುಕಟ್ಟೆಯನ್ನು ಒಂದು ರೀತಿಯ ಮನಸ್ಸೆಂದು ನಾವು ಭಾವಿಸಬಹುದೆಂಬ ವಿಚಾರವು ಹಯಾಕ್‌ರವರಿಗೆ ಇನ್ನಷ್ಟು ರೋಮಂಚನಗೊಳಿಸಿತು.

ಆಡಮ್ ಸ್ಮಿತ್ ಅವರ "ಅದೃಶ್ಯವಾದ ಕೈ"ಯು ಈಗಾಗಲೇ, ಮಾನವನ ಚಟುವಟಿಕೆಯ ಒಂದು ಸ್ವಾಯತ್ತ ವಲಯವಾಗಿ, ಮತ್ತು ಆದ್ದರಿಂದ ವೈಜ್ಞಾನಿಕ ಜ್ಞಾನದ ಒಂದು ಸಮಂಜಸ ವಸ್ತುವಾಗಿ ಮಾರುಕಟ್ಟೆಯ ಆಧುನಿಕ ಪರಿಕಲ್ಪನೆಯನ್ನು ನಮಗೆ ನೀಡಿದೆ. ಆದರೆ ಸ್ಮಿತ್ ತಮ್ಮ ಜೀವನದ ಅಂತ್ಯದವರೆಗೆ, 18ನೇ ಶತಮಾನದ ನೈತಿಕವಾದಿಯಾಗಿದ್ದರು. ವ್ಯಕ್ತಿಗತ ಸದ್ಗುಣದ ಬೆಳಕಿನಲ್ಲಿ ಮಾತ್ರ ಮಾರುಕಟ್ಟೆಯನ್ನು ಸಮರ್ಥಿಸಬಹುದೆಂದು ಅವರು ಭಾವಿಸಿದ್ದರು ಮತ್ತು ಬೇರೆ ಯಾವ ಆಸಕ್ತಿಯೂ ಇಲ್ಲದೆ ಕೇವಲ ವ್ಯಾಪಾರೀ ಸ್ವಹಿತಾಸಕ್ತಿಯಿಂದ ಆಳಲ್ಪಡುವ ಯಾವುದೇ ಸಮಾಜವೂ ಸಮಾಜವಲ್ಲ ಎಂಬ ಆತಂಕ ಅವರಿಗಿತ್ತು. ನವ ಉದಾರವಾದವೆಂದರೆ ಆ ಆತಂಕವಿಲ್ಲದ ಆಡಂ ಸ್ಮಿತ್ ಎಂದೇ ಅರ್ಥ.

ಹಯಾಕ್ ಅವರು ಒಬ್ಬ ಸಾಧಾರಣ ಮಟ್ಟದ ಅರ್ಥಶಾಸ್ತ್ರಜ್ಞನಾಗಿದ್ದರು ಮತ್ತು ಎಲ್ಲವನ್ನೂ ಅರ್ಥಶಾಸ್ತ್ರಕ್ಕೆ ತಂದು ಕೂರಿಸುವ ಅವರ ಚಿಂತನೆಯ ಶೈಲಿಯನ್ನು ನೋಡಿದರೆ ಅವರನ್ನು ನವ ಉದಾರವಾದಿಗಳ ಪಿತಾಮಹ ಎಂದು ಪರಿಗಣಿಸಿರುವುದು ಸ್ವಲ್ಪ ವ್ಯಂಗ್ಯಾತ್ಮಕವಾಗಿದೆ. ಅವರು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ಗೆ ಪ್ರಾಧ್ಯಾಪಕರಾಗಿ ನೇಮಕವಾಗುವಾಗ ಯಾರದ್ದಾದರೂ ಎದುರು ಪೈಪೋಟಿಗಿಳಿಯಲು ಅವರು ಯಾರ ನದರಿಗೂ ಬರದ, ವಿಯೆನ್ನಾ ಚಿಂತನಾ ಧಾರೆಯ ಒಬ್ಬ ಯುವ ತಂತ್ರಜ್ಞರಾಗಿದ್ದರು, ಅದಾಗಲೇ ಕೇಂಬ್ರಿಡ್ಜ್‌ನಲ್ಲಿ ತಾರೆಯಾಗಿ ಮಿನುಗುತ್ತಿದ್ದ ಮೇನಾರ್ಡ್ ಕೇನ್ಸ್‌ರವರ ಮುಂದಂತೂ ಮಂದ ಎನಿಸುವಂತಿದ್ದರು.

ನಂತರ ಹಯಾಕ್‌ರವರ ಚಿಂತನೆಗಳು ಕೇನ್ಸ್‌ರವರ ವಿಚಾರಗಳಿಂದ ಹಿಮ್ಮೆಟ್ಟಿಸಲ್ಪಟ್ಟವು. 1936ರಲ್ಲಿ ಪ್ರಕಟಿಸಲ್ಪಟ್ಟ ಕೇನ್ಸ್‌ರವರ *ಜನರಲ್ ಥಿಯರಿ ಆಫ್ ಎಂಪ್ಲಾಯ್‌ಮೆಂಟ್, ಇಂಟರೆಸ್ಟ್ ಅಂಡ್ ಮನಿ* ಎಂಬ ಕೃತಿಯು ಒಂದು ಮೇರು ಕೃತಿಯಾಗಿ ಹೊರಹೊಮ್ಮಿತು. ಸಾರ್ವಜನಿಕ ಚರ್ಚೆಯಲ್ಲಿ ಈ ಕೃತಿಯು ಹೆಚ್ಚು ಆಸಕ್ತಿ ಮೂಡಿಸುವುದರ ಮೂಲಕ ಪ್ರಾಬಲ್ಯವನ್ನು ಸಾಧಿಸಿತು, ಅದರಲ್ಲೂ ತರಬೇತಿಯಲ್ಲಿದ್ದ ಯುವ ಇಂಗ್ಲಿಷ್ ಅರ್ಥಶಾಸ್ತ್ರಜ್ಞರಿಗೆ ಬುದ್ಧಿವಂತ, ಧೈರ್ಯಶಾಲಿ ಮತ್ತು ಸಾಮಾಜಿಕ ಸಂಪರ್ಕವನ್ನು ಹೊಂದಿದ ಕೇನ್ಸ್ ಎಂದರೆ ಒಂದು ಆದರ್ಶವಾಗಿತ್ತು. ಎರಡನೇ ಜಾಗತಿಕ ಯುದ್ಧದ ಅಂತ್ಯದ ವೇಳೆಗೆ, ಅನೇಕ ಪ್ರಮುಖ ಮುಕ್ತ ಮಾರುಕಟ್ಟೆಗಾರರು ಕೇನ್ಸ್‌ನ ಚಿಂತನೆಯ ಮಾರ್ಗಕ್ಕೆ ಬಂದರು, ಆಧುನಿಕ ಆರ್ಥಿಕ ವ್ಯವಸ್ಥೆಯನ್ನು ನಿರ್ವಹಿಸುವಲ್ಲಿ ಸರ್ಕಾರವು ಪಾತ್ರ ವಹಿಸಬಹುದೆಂದು ಅವರು ಒಪ್ಪಿಕೊಂಡರು. ಇದರ ಪರಿಣಾಮವಾಗಿ

ಹಯಾಕ್ ಮೇಲಿದ್ದ ಅವರ ಆರಂಭಿಕ ಉತ್ಸಾಹವು ಕಣ್ಮರೆಯಾಯಿತು. ಏನೂ ಮಾಡದೆ ಆರ್ಥಿಕ ಖಿನ್ನತೆಯನ್ನು ಗುಣಪಡಿಸಬಹುದೆಂಬ ಹಯಾಕ್‌ನ ವಿಶಿಷ್ಟ ಕಲ್ಪನೆಯು ಸಿದ್ಧಾಂತ ಮತ್ತು ಆಚರಣೆಯಲ್ಲಿ ಅಪಖ್ಯಾತಿ ಪಡೆಯಿತು. ಕೇನ್ಸ್‌ರವರನ್ನು ಟೀಕಿಸಿ ಬರೆದ ತನ್ನ ಕೃತಿಯನ್ನು ಜನರು ಮರೆತುಬಿಡಲಿ ಎಂದು ಆಶಿಸಿದ್ದೆ ಎಂಬುದನ್ನು ಹಯಾಕ್ ಅನಂತರ ಒಪ್ಪಿಕೊಂಡಿದ್ದಾರೆ.

ಹಯಾಕ್ ಪೆದ್ದು ಅನಿಸುವಂತೆ ಇದ್ದರು: ಎತ್ತರ ನಿಲುವನ್ನು ಹೊಂದಿದ ಪ್ರಾಧ್ಯಾಪಕರಾಗಿದ್ದರು, ಗಟ್ಟಿ ಒತ್ತುಕೊಟ್ಟು ಮಾತನಾಡುತ್ತಿದ್ದರು, ಹೈ–ನೆಕ್ ಉಣ್ಣೆಯ ಕೋಟನ್ನು ಧರಿಸಿ ತಮ್ಮನ್ನು ಎಲ್ಲರೂ ಔಪಚಾರಿಕವಾಗಿ "ವಾನ್ ಹಯಾಕ್" ಎಂದು ಕರೆಯುವಂತೆ ಒತ್ತಾಯಿಸುತ್ತಿದ್ದರು, ಆದರೆ ವಿದ್ಯಾರ್ಥಿಗಳು ಅವರ ಹಿಂದುಗಡೆ ಅವರನ್ನು "ಮಿ. ಚಂಚಲ ಮನುಷ್ಯ" ಎಂದು ಅಡ್ಡ ಹೆಸರಿನಿಂದ ಕರೆಯುತ್ತಿದ್ದರು. 1936ರಲ್ಲಿ ಅವರು ಯಾವುದೇ ಸ್ಥಾನಮಾನವಿಲ್ಲದ ಮತ್ತು ಸ್ಪಷ್ಟ ಭವಿಷ್ಯವಿಲ್ಲದ ಸಿದ್ಧಾಂತಿಯಾಗಿದ್ದರು. ಆದರೂ, ಹಿಂದೆ ಕೇನ್ಸ್‌ನ ಜಗತ್ತಿನಲ್ಲಿದ್ದ ಹಾಗೆ ನಾವು ಈಗ ಹಯಾಕ್‌ನ ಪ್ರಪಂಚದಲ್ಲಿ ವಾಸಿಸುತ್ತಿದ್ದೇವೆ. ಹಾರ್ವರ್ಡ್ ವಿಶ್ವವಿದ್ಯಾಲಯದ ಮಾಜಿ ಅಧ್ಯಕ್ಷರು ಮತ್ತು ಕ್ಲಿಂಟ್‌ನ್‌ರವರ ಮಾರ್ಗದರ್ಶಕರಾದ ಲಾರೆನ್ಸ್ ಸಮ್ಮರ್ಸ್‌ರವರು ಹೇಳುವಂತೆ, ಬೆಲೆಗಳ ವ್ಯವಸ್ಥೆಯು ಮನಸ್ಸಿನಂತೆ ಎನ್ನುವ ಹಯಾಕ್‌ನ ಕಲ್ಪನೆಯು "20ನೇ ಶತಮಾನದಲ್ಲಿ ಹೊರಬಿದ್ದ ಸೂಕ್ಷ್ಮ ಅರ್ಥಶಾಸ್ತ್ರದ ರೀತಿಯಲ್ಲಿ ಸೂಕ್ಷ್ಮಗ್ರಾಹಿ ಮತ್ತು ಮೂಲ ಕಲ್ಪನೆಯಾಗಿದೆ" ಮತ್ತು "ಇಂದಿನ ಅರ್ಥಶಾಸ್ತ್ರದ ಪಠ್ಯದಿಂದ ಕಲಿಯಬೇಕಾದ ಏಕೈಕ ಪ್ರಮುಖ ವಿಷಯವಾಗಿದೆ". ಅಂದರೂ ಇದು ಅದರ ಮೌಲ್ಯವನ್ನು ತಕ್ಕ ರೀತಿಯಲ್ಲಿ ಪರಿಗಣಿಸುತ್ತಿಲ್ಲ. ಕೇನ್ಸ್ ಶೀತಲ ಸಮರವನ್ನು ಊಹಿಸಲಿಲ್ಲ, ಆದರೆ ಅವರ ಚಿಂತನೆಯು ಶೀತಲ ಸಮರ ಲೋಕದ ಪ್ರತಿಯೊಂದು ಮಗ್ಗಲಿಗೂ ಹರಡಲ್ಪಟ್ಟಿತ್ತು; ಹಾಗೆಯೇ ಹಯಾಕ್‌ನ ಚಿಂತನೆಯು 1989ನೇ ಇಸವಿಯ ನಂತರದ ಜಗತ್ತಿನ ಪ್ರತಿ ಮಗ್ಗಲಿಗೂ ತನ್ನನ್ನು ತಾನು ವಿಸ್ತರಿಸಿಕೊಂಡಿದೆ.

ಹಯಾಕ್‌ರವರದ್ದು ಒಟ್ಟಾರೆ ಪೂರ್ಣ ದೃಷ್ಟಿಕೋನವಾಗಿತ್ತು: ಆರ್ಥಿಕ ಸ್ಪರ್ಧೆಯ ಮಾದರಿಯಲ್ಲಿ ಎಲ್ಲಾ ವಾಸ್ತವತೆಯನ್ನು ಸಂರಚಿಸುವ ಒಂದು ಮಾರ್ಗವಾಗಿತ್ತು. ಹೆಚ್ಚು ಕಡಿಮೆ ಎಲ್ಲಾ ಮಾನವ ಚಟುವಟಿಕೆಗಳೂ ಆರ್ಥಿಕ ಲೆಕ್ಕಾಚಾರದ ಒಂದು ರೂಪವೆಂದು ಊಹಿಸುವ ಮೂಲಕ ಅವರು ತಮ್ಮ ವಾದವನ್ನು ಪ್ರಾರಂಭಿಸುತ್ತಾರೆ ಹಾಗೂ ಸಂಪತ್ತು, ಮೌಲ್ಯ, ವಿನಿಮಯ, ವೆಚ್ಚ ಮತ್ತು ವಿಶೇಷವಾಗಿ ಬೆಲೆಗಳ ಪ್ರಮುಖ ಪರಿಕಲ್ಪನೆಗಳಿಗೆ ಇದನ್ನು ಸಮೀಕರಿಸುತ್ತಾರೆ. ಅವರ ಪ್ರಕಾರ ಬೆಲೆಗಳು ಪೂರೈಕೆ ಮತ್ತು ಬೇಡಿಕೆಯಿಂದ ನಿರ್ವಹಿಸಲ್ಪಡುತ್ತಿದ್ದು, ಅಗತ್ಯತೆ ಮತ್ತು ಉಪಯುಕ್ತತೆಗನುಗುಣವಾಗಿ ವಿರಳವಾಗಿರುವ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಹಂಚುವ ವಿಧಾನವಾಗಿದೆ. ಬೆಲೆ ವ್ಯವಸ್ಥೆಯು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕಾದರೆ ಮಾರುಕಟ್ಟೆಗಳು ಮುಕ್ತವಾಗಿರಬೇಕು ಮತ್ತು ಸ್ಪರ್ಧಾತ್ಮಕವಾಗಿರಬೇಕು. ಅಂದರೆ ಬೆಲೆಗಳನ್ನು ನಿಯಂತ್ರಿಸುವ ಕೆಲಸಕ್ಕೆ ಕೈ ಹಾಕದೆ ಅವುಗಳನ್ನು ಅವುಗಳ ಗೊಡವೆಗೆ ಬಿಟ್ಟು ಬಿಡಬೇಕು. ಇದನ್ನು ಮಾಡಲು ಸರ್ಕಾರವು ತಟಸ್ಥ ಹಣದ ನೀತಿಯನ್ನು ಅನುಸರಿಸಬೇಕೆಂಬ ಸಲಹೆಯನ್ನು ಹಯಾಕ್ ನೀಡುತ್ತಾರೆ. ಸ್ಮಿತ್ ಆರ್ಥಿಕತೆಯನ್ನು ಒಂದು ಸ್ವಾಯತ್ತ ಗೋಳದಂತೆ ಊಹಿಸಿದಂದಿನಿಂದಲೂ ಮಾರುಕಟ್ಟೆಯು ಕೇವಲ ಸಮಾಜದ ಒಂದು ಭಾಗವಾಗಿರದೆ, ಇಡೀ ಸಮಾಜವಾಗುವ ಸಾಧ್ಯತೆ ಅಲ್ಲಿತ್ತು. ಅಂತಹ ಸಮಾಜದಲ್ಲಿ, ಪುರುಷರು ಮತ್ತು ಮಹಿಳೆಯರು ತಮ್ಮದೇ ಆದ ಸ್ವಹಿತಾಸಕ್ತಿಯನ್ನು ಅನುಸರಿಸಬೇಕು ಮತ್ತು ವಿರಳವಾದ ಪ್ರತಿಫಲಗಳಿಗೆ ಸ್ಪರ್ಧಿಸಬೇಕು. "ಯಾರು ಮತ್ತು ಯಾವುದು

ಮೌಲ್ಯಯುತವಾಗಿದೆ ಎಂಬುದನ್ನು ಗ್ರಹಿಸಲು" ಸ್ಪರ್ಧೆಯ ಮೂಲಕ ಸಾಧ್ಯವಾಗುತ್ತದೆ ಎಂದು ಸಾಮಾಜಿಕ ವಿಜ್ಞಾನಿ ವಿಲ್ ಡೇವಿಸ್ ಬರೆದಿದ್ದಾರೆ.

ಇತಿಹಾಸ ಗೊತ್ತಿರುವ ಯಾವುದೇ ವ್ಯಕ್ತಿಯಾದರೂ ದಬ್ಬಾಳಿಕೆ ಮತ್ತು ಶೋಷಣೆಗೆ ವಿರುದ್ಧವಾಗಿ ಕಟ್ಟಬೇಕಾದ ರಕ್ಷಣಾ ವ್ಯವಸ್ಥೆಯನ್ನು ಗಮನಿಸುತ್ತಾನೆ – ಅಭಿವೃದ್ಧಿ ಹೊಂದುತ್ತಿರುವ ಮಧ್ಯಮ ವರ್ಗ ಮತ್ತು ನಾಗರಿಕ ಕ್ಷೇತ್ರ, ಉಚಿತ ಸಂಸ್ಥೆಗಳು, ಸಾರ್ವತ್ರಿಕ ಮತದಾನದ ಹಕ್ಕು, ಆತ್ಮ ಸಾಕ್ಷಿ, ಸಭೆ, ಧರ್ಮ ಮತ್ತು ಪತ್ರಿಕೆಯ ಸ್ವಾತಂತ್ರ್ಯ, ವ್ಯಕ್ತಿಯೊಬ್ಬ ಘನತೆ ದೂತ ಎಂಬುದನ್ನು ಗುರುತಿಸುವ ಅಗತ್ಯ –ಇವುಗಳಿಗೆ ಹಯಾಕ್‌ನ ಚಿಂತನೆಯಲ್ಲಿ ಯಾವುದೇ ವಿಶೇಷ ಸ್ಥಾನವಿಲ್ಲ. ಹಯಾಕ್, ಮಾರುಕಟ್ಟೆಯು ಒಂದು ನಿಜವಾದ ರಾಜಕೀಯ ಅಪಾಯದ (ನಿರಂಕುಶವಾದ) ವಿರುದ್ಧ ಅಗತ್ಯವಾದ ಎಲ್ಲ ರಕ್ಷಣೆಗಳನ್ನು ಒದಗಿಸುತ್ತದೆ ಎಂಬ ಕಲ್ಪನೆಯ ಮೇಲೆ ನವ–ಉದಾರವಾದವನ್ನು ನಿರ್ಮಿಸಿದ್ದಾರೆ. ಅದನ್ನು ತಡೆಗಟ್ಟಬೇಕೆಂದರೆ ಸರ್ಕಾರವು ಮುಕ್ತ ಮಾರುಕಟ್ಟೆಯನ್ನು ಹೊಂದುವ ಅಗತ್ಯವಿದೆ ಎಂದು ಅವರು ವಾದಿಸಿದ್ದಾರೆ.

ಈ ಕೊನೆಯ ಸಂಗತಿಯು ನವ ಉದಾರವಾದವನ್ನು 'ನವ'ವನ್ನಾಗಿ ಮಾಡುತ್ತದೆ. ಇದು "ಸಾಂಪ್ರದಾಯಿಕ ಉದಾರವಾದ" ಎಂದು ಕರೆಯಲ್ಪಡುವ, ಮುಕ್ತ ಮಾರುಕಟ್ಟೆ ಮತ್ತು ಕನಿಷ್ಠ ಅಧಿಕಾರವನ್ನು ಹೊಂದಿದ ಪ್ರಭುತ್ವದ ಮೇಲಿನ ಹಳೆಯ ನಂಬಿಕೆಗಳ ಪ್ರಮುಖವಾದ ನಿರ್ಣಾಯಕ ಮಾರ್ಪಾಡಾಗಿದೆ. ಸಾಂಪ್ರದಾಯಿಕ ಉದಾರೀಕರಣದಲ್ಲಿ ವ್ಯಾಪಾರಿಗಳು ಸರಳವಾಗಿ "ನಮ್ಮನ್ನು ನಮ್ಮಷ್ಟಕ್ಕೆ ಬಿಟ್ಟು ಬಿಡಿ" ಎಂದು ಸರ್ಕಾರವನ್ನು ಕೇಳಿದರು. ಆದರೆ ನವ ಉದಾರವಾದವು ಮಾರುಕಟ್ಟೆ ಆರ್ಥಿಕತೆಯ ಸಂಘಟನೆಯಲ್ಲಿ ರಾಜ್ಯವು ಸಕ್ರಿಯವಾಗಿರಬೇಕು ಎಂಬ ಅಂಶವನ್ನು ಗುರುತಿಸಿದೆ. ಮುಕ್ತ ಮಾರುಕಟ್ಟೆಯನ್ನು ಅನುಮತಿಸುವ ಪರಿಸ್ಥಿತಿಗಳು ರಾಜಕೀಯವಾಗಿ ಗೆಲ್ಲಬೇಕು ಮತ್ತು ಮುಕ್ತ ಮಾರುಕಟ್ಟೆಯನ್ನು ನಿರಂತರವಾಗಿ ಬೆಂಬಲಿಸಲು ಸರ್ಕಾರವನ್ನು ಮರುವಿನ್ಯಾಸಗೊಳಿಸಬೇಕೆಂಬ ವಿಷಯವನ್ನು ಇದು ಸೂಚಿಸುತ್ತದೆ.

ಅದು ಎಲ್ಲವೂ ಅಲ್ಲ: ಪ್ರಜಾಪ್ರಭುತ್ವ ರಾಜಕೀಯದ ಎಲ್ಲಾ ಅಂಶಗಳು, ಮತದಾರರ ಆಯ್ಕೆಗಳಿಂದ ಹಿಡಿದು ರಾಜಕಾರಣಿಗಳ ನಿರ್ಧಾರಗಳು, ಸಂಪೂರ್ಣವಾಗಿ ಆರ್ಥಿಕ ವಿಶ್ಲೇಷಣೆಗೆ ಗುರಿಯಾಗಬೇಕು. ಕಾನೂನು ರಚಿಸುವವನು ಮಾರುಕಟ್ಟೆಯ ನೈಸರ್ಗಿಕ ಕ್ರಮಗಳನ್ನು ವಿರೂಪಗೊಳಿಸಬಾರದು ಮತ್ತು ಸಾಮಾನ್ಯವಾಗಿ ಮಾರುಕಟ್ಟೆಯು ಸ್ವಾಭಾವಿಕವಾಗಿ ಕಾರ್ಯನಿರ್ವಹಿಸುವಂತಹ ಸ್ಥಿರ, ತಟಸ್ಥ, ಸಾರ್ವತ್ರಿಕ ಕಾನೂನಿನ ಚೌಕಟ್ಟನ್ನು ಸರ್ಕಾರವು ಒದಗಿಸುತ್ತದೆ. ಸರ್ಕಾರದ ಪ್ರಜ್ಞಾಪೂರ್ವಕ ನಿರ್ದೇಶನವು "ಹೊಂದಾಣಿಕೆಯ ಸ್ವಯಂಚಾಲಿತ ಕಾರ್ಯವಿಧಾನ" ಕ್ಕೆ ಎಂದಿಗೂ ಯೋಗ್ಯವಾಗಿಲ್ಲ – ಅಂದರೆ ಬೆಲೆ ವ್ಯವಸ್ಥೆ, ಇದು ಕೇವಲ ದಕ್ಷತೆಯನ್ನು ಮಾತ್ರವಾಗಿರದೇ ಸ್ವಾತಂತ್ರ್ಯವನ್ನು ಗರಿಷ್ಠಗೊಳಿಸುತ್ತದೆ, ಅಥವಾ ಪುರುಷರು ಮತ್ತು ಮಹಿಳೆಯರಿಗೆ ತಮ್ಮ ಸ್ವಂತ ಜೀವನದ ಬಗ್ಗೆ ಉಚಿತ ಆಯ್ಕೆಗಳನ್ನು ಮಾಡಲು ಅವಕಾಶ ಕಲ್ಪಿಸುತ್ತದೆ.

ಕೇನ್ಸ್‌ರವರು ಲಂಡನ್ ಮತ್ತು ವಾಷಿಂಗ್ಟನ್ ನಡುವೆ ಓಡಾಡುತ್ತ ಯುದ್ಧಾನಂತರದ ವ್ಯವಸ್ಥೆಯನ್ನು ನಿರ್ಮಿಸುತ್ತ ಇರುವಾಗ, ಹಯಾಕ್ ಕೇಂಬ್ರಿಡ್ಜ್‌ನಲ್ಲಿ ತುಟಿ ಚಾಚಿಕೊಂಡು ಬೇಸರದಿಂದ ಕೂತಿದ್ದರು. ಯುದ್ಧಕಾಲದ ಸ್ಥಳಾಂತರದ ಸಮಯದಲ್ಲಿ ಅವರನ್ನು ಅಲ್ಲಿಗೆ ಕಳುಹಿಸಲಾಗಿತ್ತು; ತಾನು 'ವಿದೇಶಿಯರಿಂದ' ಸುತ್ತುವರಿಯಲ್ಪಟ್ಟಿದ್ದೇನೆ ಹಾಗೂ ಅವರಲ್ಲಿ "ಎಲ್ಲ ಪ್ರಕಾರದ ಪೌರ್ವಾತ್ಯರೂ ಇದ್ದಾರೆ" ಮತ್ತು "ವಾಸ್ತವಿಕವಾಗಿ ಎಲ್ಲಾ ರಾಷ್ಟ್ರೀಯತೆಗಳ ಯುರೋಪಿಯನ್ನರು ಇದ್ದಾರೆ, ಆದರೆ ಅವರಲ್ಲಿ ನಿಜವಾಗಿಯೂ ಬುದ್ಧಿವಂತರಾದವರು ಬಹಳ ಕಡಿಮೆ" ಎಂದೆಲ್ಲ ದೂರಿದ್ದರು.

ಹಯಾಕ್ ಯಾವುದೇ ಪ್ರಭಾವ ಅಥವಾ ಗೌರವವಿಲ್ಲದೆ ಇಂಗ್ಲೆಂಡಿನಲ್ಲಿ ಸಿಲುಕಿಕೊಂಡಿದ್ದರು, ಈ ಸಮಯದಲ್ಲಿ ಅವರನ್ನು ಸಂತೈಸಿದ್ದು 'ಮುಂದೊಂದು ದಿನ ತಮ್ಮ ಆಲೋಚನೆಯು ಎಷ್ಟು ಪ್ರಾಮುಖ್ಯತೆಯನ್ನು ಗಳಿಸುತ್ತದೆಯೆಂದರೆ ಕೇನ್ಸ್ ಮತ್ತು ಇತರ ಬುದ್ಧಿಜೀವಿಗಳ ಕಾಲ ಕೆಳಗಿನ ನೆಲವನ್ನು ಕುಸಿಯುವಂತೆ ಮಾಡುತ್ತದೆ' ಎಂಬ ವಿಚಾರವೊಂದೇ ಆಗಿತ್ತು. ಬೆಲೆ ವ್ಯವಸ್ಥೆಯನ್ನು ಅದರದ್ದೇ ಆದ ಸ್ವಂತ ಸಾಧನಗಳಿಗೆ ಬಿಟ್ಟುಬಿಟ್ಟರೆ ಅದು ಒಂದು ರೀತಿಯ ಮನಸ್ಸಿನಂತೆ ಕಾರ್ಯನಿರ್ವಹಿಸುತ್ತದೆ, ಜೊತೆಗೆ ಅದು ಕೇವಲ ಯಾವುದೋ ಒಂದು ಮನಸ್ಸಾಗಿರದೆ ಒಬ್ಬ ಸರ್ವಾಂತರ್ಯಾಮಿ ಮನಸ್ಸಾಗಿರುತ್ತದೆ: ವ್ಯಕ್ತಿಗಳು ಗ್ರಹಿಸಲು ಸಾಧ್ಯವಿಲ್ಲದ್ದನ್ನು ಮಾರುಕಟ್ಟೆಯು ಲೆಕ್ಕಾಚಾರ ಹಾಕುತ್ತದೆ. ಓರ್ವ ಬುದ್ಧಿಜೀವಿ ಒಡನಾಡಿಯಾಗಿ ಹಯಾಕ್‌ನನ್ನು ಸಮೀಪಿಸಿದ ಅಮೇರಿಕನ್ ಪತ್ರಕರ್ತರಾದ ವಾಲ್ಟರ್ ಲಿಪ್ಮೆನ್ ಹಯಾಕ್ ಬಗ್ಗೆ ಈ ರೀತಿ ಹೇಳುತ್ತಾರೆ, "ಸಮಾಜದ ಇಡೀ ಯೋಜನೆಯನ್ನು ಯಾವುದೇ ಮಾನವ ಮನಸ್ಸು ಎಂದಿಗೂ ಅರ್ಥಮಾಡಿಕೊಂಡಿಲ್ಲ... ಇದ್ದಿದ್ದರಲ್ಲಿ ಮನಸ್ಸು ಯೋಜನೆಯ ಬಗೆಗಿನ ಸ್ವಂತದ ಆವೃತ್ತಿಯನ್ನು ಮಾತ್ರ ಅರ್ಥಮಾಡಿಕೊಳ್ಳಬಹುದು. ಮನುಷ್ಯನಿಗೆ ಒಂದು ಛಾಯಾರೂಪವು ಹೇಗೋ ಹಾಗೆ ವಾಸ್ತವದೊಂದಿಗೆ ಇದರ ಸಂಬಂಧ."

ಇದು ಜ್ಞಾನ ಮೀಮಾಂಸೆಯ ಒಂದು ಮಹಾ ಸಮರ್ಥನೆಯಾಗಿದೆ – ಮಾರುಕಟ್ಟೆಯು ಜ್ಞಾನದ ಒಂದು ಮಾರ್ಗವಾಗಿದೆ, ಅದು ಯಾವುದೇ ಒಂದು ಮನಸ್ಸಿನ ಸಾಮರ್ಥ್ಯವನ್ನು ಅಮೂಲಾಗ್ರವಾಗಿ ಮೀರುವ ಜ್ಞಾನವಾಗಿದೆ. ಅಂತಹ ಮಾರುಕಟ್ಟೆಯು ಮನುಷ್ಯರಿಂದ ಕಡಿಮೆ ಹಸ್ತಕ್ಷೇಪವನ್ನು ಒಳಗೊಳ್ಳುತ್ತದೆ, ಅದನ್ನು ಕುಶಲತೆಯಿಂದ ಬಳಸಿಕೊಳ್ಳಬೇಕಾದಂಥದ್ದು, ಅಧ್ಯಯನ ಮಾಡುವ ಮತ್ತು ಶಮನಗೊಳಿಸಬೇಕಾದ ಶಕ್ತಿಯಂತಲ್ಲ. ಕೇನ್ಸ್‌ರವರು ನಂಬಿರುವಂತೆ, ಇದು ಬೆಳವಣಿಗೆ ಅಥವಾ ಸ್ಥಿರ ಹಣದಂತಹ ಅಪೇಕ್ಷಣೀಯ ಸಾಮಾಜಿಕ ಗುರಿಗಳನ್ನು ಸಾಧಿಸುವ ಒಂದು ತಂತ್ರವಾಗಿದೆ ಎಂದು ಅರ್ಥಶಾಸ್ತ್ರವು ಭಾವಿಸುತ್ತದೆ. ಸಾಮಾಜಿಕ ಗುರಿಯು ಮಾರುಕಟ್ಟೆಯ ಪ್ರಮುಖ ನಿರ್ವಹಣೆಯಾಗಿದೆ. ಅದರ ಸರ್ವಾಂತರ್ಯಾಮಿತ್ವದಲ್ಲಿ ಮಾರುಕಟ್ಟೆಯು ಕೇವಲ ನ್ಯಾಯಸಮ್ಮತವಾದ ಜ್ಞಾನವನ್ನು ಮಾತ್ರ ರೂಪಿಸುತ್ತದೆ, ಅದರ ಮತ್ತೆಲ್ಲಾ ರೀತಿಯ ಚಿಂತನೆಗಳೂ ಭಾಗಶಃ ಆಗಿರುತ್ತವೆ, ಅದರ ಎರಡೂ ರೀತಿಯ ಗ್ರಹಿಕೆಯಲ್ಲಿ: ಅವು ಒಟ್ಟಾರೆಯಾಗಿ ಒಂದು ಭಾಗವನ್ನು ಮಾತ್ರ ಗ್ರಹಿಸುತ್ತವೆ ಮತ್ತು ವಿಶೇಷ ಆಸಕ್ತಿಯ ಪರವಾಗಿ ಸಮರ್ಥಿಸುತ್ತವೆ. ಪ್ರತ್ಯೇಕವಾಗಿ ತೆಗೆದುಕೊಂಡರೆ, ನಮ್ಮ ಮೌಲ್ಯಗಳು ವ್ಯಕ್ತಿಗತವಾಗಿವೆ ಇಲ್ಲವೆ ಕೇವಲ ಅಭಿಪ್ರಾಯಗಳಾಗಿವೆ. ಒಟ್ಟಾರೆಯಾಗಿ ಮಾರುಕಟ್ಟೆಯು ಅವುಗಳನ್ನು ಬೆಲೆಗಳನ್ನಾಗಿ ಅಥವಾ ವಸ್ತುನಿಷ್ಠ ಸತ್ಯಗಳನ್ನಾಗಿ ಪರಿವರ್ತಿಸುತ್ತದೆ.

ಲಂಡನ್ ಸ್ಕೂಲ್ ಆಫ್ ಎಕಾನಾಮಿಕ್ಸ್‌ನಿಂದ ನಿರಾಶನಾಗಿ ಹೊರಬಂದ ಮೇಲೆ ಹಯಾಕ್ ಕಾರ್ಪೊರೇಟ್ ಪ್ರಾಯೋಜಕತ್ವವಿಲ್ಲದ ಯಾವುದೇ ಶಾಶ್ವತ ನೇಮಕಾತಿಯನ್ನು ಹೊಂದಲಿಲ್ಲ. 1950ರ ದಶಕದಲ್ಲಿ ಉದಾರಬಾದೀ ಭಿನ್ನಮತೀಯರ ಜಾಗತಿಕ ಕೇಂದ್ರವಾದ ಚಿಕಾಗೊ ವಿಶ್ವವಿದ್ಯಾನಿಲಯದಲ್ಲಿ ಅವರ ಸಂಪ್ರದಾಯವಾದಿ ಸಹೋದ್ಯೋಗಿಗಳು ಹಯಾಕ್‌ರವರನ್ನು ಪ್ರತಿಗಾಮಿಗಳ ತುತ್ತೂರಿಯೆಂದೂ, "ಸ್ಟಾಕ್ ಬಲಪಂಥೀಯ ಪ್ರಾಯೋಜಕನೊಂದಿಗೆ ಇರುವ ಸ್ಟಾಕ್ ಬಲಪಂಥೀಯ ಮನುಷ್ಯ"ನೆಂದು ಕರೆಯುತ್ತಿದ್ದರು. 1972ರ ಉತ್ತರಾರ್ಧದಲ್ಲಿ ಸ್ನೇಹಿತನೊಬ್ಬನು ಸಾಲ್ಜ್‌ಬರ್ಗ್‌ನಲ್ಲಿ ಹಯಾಕ್‌ರವರನ್ನು ಭೇಟಿಮಾಡಿದರೆ ಅವನೆದುರಿಗೆ ಕಂಡಿದ್ದು ತನ್ನ ಸ್ವಾಭಾವಿಕ ಜೀವನವು ವ್ಯರ್ಥವಾಯಿತು ಎಂದು ಅಂದುಕೊಳ್ಳುತ್ತ. ಸ್ವಮರುಕದಿಂದ ಕುಗ್ಗಿದ ಒಬ್ಬ ವಯಸ್ಸಾದ ವ್ಯಕ್ತಿ. ಅವರು ಏನು ಬರೆದರು ಎಂಬುದನ್ನು ತಿಳಿಯಲಿಚ್ಛಿಸುವವರು ಯಾರೂ ಇರಲಿಲ್ಲ!

ಹೇಗಾದರೂ, ಅಲ್ಲಿ ಭರವಸೆಯ ಚಿಹ್ನೆಗಳು ಇದ್ದವು: ಹಯಾಕ್ ರೊನಾಲ್ಡ್ ರೀಗನ್ ಮತ್ತು ಮಾರ್ಗರೇಟ್ ಥ್ಯಾಚರ್‌ರವರನ್ನೊಳಗೊಂಡಂತೆ ಬ್ಯಾರಿ ಗೋಲ್ಡ್‌ವಾಟರ್‌ರವರ  ನೆಚ್ಚಿನ ತತ್ವಜ್ಞಾನಿಯಾಗಿದ್ದರು. ಕೇಳುಗರಿದ್ದರೆ ಹೇಳುತ್ತೇನೆ, ಕುಟುಂಬ, ಸಮುದಾಯ, ಕಠಿಣ ಶ್ರಮದಂತಹ ವಿಕ್ಟೋರಿಯನ್ ಮೌಲ್ಯಗಳ ಪುನರುಜ್ಜೀವನದೊಂದಿಗೆ ಹಯಾಕ್‌ರ ಮುಕ್ತ ಮಾರುಕಟ್ಟೆಯ ತತ್ವವನ್ನು ಒಟ್ಟಿಗೆ ಸೇರಿಸುವುದಾಗಿ ಭರವಸೆ ನೀಡುವ ಮೂಲಕ ಮಾರ್ಗರೇಟ್ ಥ್ಯಾಚರ್ ಹಯಾಕ್‌ರನ್ನು ಹೊತ್ತು ಮೆರೆಸಿದರು.

ಹಯಾಕ್ 1975ರಲ್ಲಿ ಮಾರ್ಗರೇಟ್ ಥ್ಯಾಚರ್‌ರವರನ್ನು ಖಾಸಗಿಯಾಗಿ ಭೇಟಿಯಾದರು.  ಆ ಸಮಯದಲ್ಲಿ ಥ್ಯಾಚರ್ ಯು.ಕೆ.ಯ ವಿರೋಧ ಪಕ್ಷದ ನಾಯಕರಾಗಿ ನೇಮಕಗೊಂಡಿದ್ದರು ಮತ್ತು ಹಯಾಕ್‌ರ ದೊಡ್ಡ ಆಲೋಚನೆಯನ್ನು ಅಲೆಮಾರಿಯಿಂದ ಹೊರತೆಗೆದು ಇತಿಹಾಸಕ್ಕೆ ಸೇರಿಸುವ ತಯಾರಿಯಲ್ಲಿದ್ದರು. ಅವರಿಬ್ಬರು ಲಂಡನ್ನಿನ ಲಾರ್ಡ್ ಉತ್ತರ ಬೀದಿಯಲ್ಲಿರುವ ಆರ್ಥಿಕ ವ್ಯವಹಾರಗಳ ಸಂಸ್ಥೆಯ ಸಮೀಪ 30 ನಿಮಿಷಗಳ ಕಾಲ ಸಂಚರಿಸಿದರು. ಅನಂತರ ಮಾರ್ಗರೇಟ್ ಥ್ಯಾಚರ್‌ರವರ ಸಿಬ್ಬಂದಿ ಹಯಾಕ್‌ರವರ ಹತ್ತಿರ ಬಂದು ನೀವು ಏನು ಯೋಚಿಸಿದ್ದೀರಿ ಎಂದು  ಹಯಾಕ್‌ರನ್ನು ಕೇಳಿದರು. ಅವರು ಈ ಮಾತಿಗೆ ಏನು ತಾನೇ ಹೇಳಬಹುದು? 40 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ, ಫೆಡ್ರಿಕ್ ವಾನ್ ಹಯಾಕ್‌ರವರಿಗೆ ಕೇನ್ಸ್‌ರವರನ್ನು ಸೋಲಿಸಬಲ್ಲ ಮತ್ತು ಪ್ರಪಂಚವನ್ನು ಪುನರ್‌ಸೃಷ್ಟಿಸುವ ವ್ಯಕ್ತಿಯಾಗಿ ಹೊರಹೊಮ್ಮಬಲ್ಲ ಸ್ವ–ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಂತಹ ಶಕ್ತಿಯು ಮರಳಿ ಬಂದಿತು.

ಅವರು ಉತ್ತರಿಸಿದರು: “ಆಕೆ ಎಷ್ಟು ಸುಂದರವಾಗಿದ್ದಾಳೆ.”

ಹಯಾಕ್‌ರವರ  ದೊಡ್ಡ ವಿಚಾರವನ್ನು  ಇನ್ನೂ ದೊಡ್ಡದಾಗಿ ಮಾಡುವ ತನಕ ಅದು ಒಂದು ವಿಚಾರವೇ ಅಲ್ಲ. ಒಂದು ವೀಜೀ ಬೋರ್ಡಿನ [ಆತ್ಮಗಳನ್ನು ಕರೆಯಿಸಿಕೊಳ್ಳಲು ಬಳಸುವ ಬೋರ್ಡ್] ಮೇಲೆ ಮಿಲಯನ್‌ಗಟ್ಟಲೆ ಬೆರಳುಗಳು ಸಂಯೋಜಿತವಾಗುವಂತೆ ಸಾವಯವ ಸಂಬಂಧವುಳ್ಳ, ಸ್ವ–ಸ್ಫುರಿತ ಮತ್ತು ಮನೋಹರವಾದ ಪ್ರಕ್ರಿಯೆಗಳು ಪೂರ್ವಯೋಜಿತವಲ್ಲದ ಫಲಿತಾಂಶಗಳನ್ನು ಸೃಷ್ಟಿಸಲು ಸಂಘಟಿತವಾಗುತ್ತವೆ.  ಇದನ್ನು ಒಂದು ನಿಜವಾದ ಮಾರುಕಟ್ಟೆಗೆ ಅನ್ವಯಿಸಿದರೆ ಈ ವಿವರಣೆಯು ಒಂದು ಸಾಮಾನ್ಯೋಕ್ತಿಗಿಂತ ಸ್ವಲ್ಪ ಹೆಚ್ಚಾಗಿಯೇ ಇದೆ. ಸರಕುಗಳು ಮತ್ತು ಕಾರ್ಮಿಕರು ಹಾಗೂ ಹಣಕ್ಕೆ ಸಂಬಂಧಿಸಿದ ವಿವಿಧ ಮಾರುಕಟ್ಟೆಗಳು, ಹೇಗೆ ಆರ್ಥಿಕತೆ ಎಂದು ಕರೆಯಲ್ಪಡುವ ಸಮಾಜದ ಭಾಗವನ್ನು ರೂಪಿಸುತ್ತವೆ ಎಂಬುದನ್ನು ವಿವರಿಸಲು, ಇದನ್ನು ಮತ್ತಷ್ಟು ವಿಸ್ತರಿಸಬಹುದು. ಇದು ಕಡಿಮೆ ನೀರಸವಾಗಿದೆ, ಆದರೆ ಕ್ಷುಲ್ಲಕವೆನಿಸುತ್ತದೆ: ಈ ವಿವರಣೆಯನ್ನು ಕೇನ್ಸ್‌ರವರ ಅನುಯಾಯಿಗಳು ಸಂತೋಷದಿಂದ ಒಪ್ಪಿಕೊಳ್ಳುತ್ತಾರೆ. ಆದರೆ ಒಂದು ವೇಳೆ ನಾವು ಇದಕ್ಕಿಂತ ಒಂದು ಹೆಜ್ಜೆ ಮುಂದೆ ಹೋದರೆ ಏನಾಗುತ್ತದೆ? ಇಡೀ ಸಮಾಜವನ್ನು ನಾವು ಒಂದು ರೀತಿಯ ಮಾರುಕಟ್ಟೆ ಎಂದು ಪರಿಗಣಿಸಿದರೆ?

ಹಯಾಕ್‌ರವರ ಕಲ್ಪನೆಯು ಮತ್ತಷ್ಟು ವಿಸ್ತಾರಗೊಂಡಂತೆ, ಅದು ಹೆಚ್ಚು ಪ್ರತಿಗಾಮಿಯಾದಂತೆ,  ವೈಜ್ಞಾನಿಕ ತಟಸ್ಥತೆಯ ತೋರಿಕೆಯ ಮುಖವಾಡದ ಒಳಗೆ ಅಡಗಿಕೊಳ್ಳುತ್ತ ಹೋದಂತೆ  – ಹದಿನೇಳನೇ ಶತಮಾನದಿಂದ ಈಚೆಗಿನ ಅರ್ಥಶಾಸ್ತ್ರವನ್ನು ಪಶ್ಚಿಮದ ಪ್ರಮುಖ ಬೌದ್ಧಿಕ ಪ್ರವೃತ್ತಿಯೊಂದಿಗೆ ಜೋಡಿಸಲು ಹೆಚ್ಚು ಅವಕಾಶ ನೀಡುತ್ತ ಹೋಗುತ್ತದೆ. ಆಧುನಿಕ ವಿಜ್ಞಾನದ ಪ್ರಗತಿಯು ಒಂದು ಸಮಸ್ಯೆಯನ್ನು ಉಂಟುಮಾಡಿತು: ಒಂದು ವೇಳೆ ವಿಶ್ವವು ಸಾರ್ವತ್ರಿಕವಾಗಿ ನೈಸರ್ಗಿಕ ಕಾನೂನುಗಳಿಗೆ ವಿಧೇಯವಾಗಿರುವುದಾದರೆ, ಮನುಷ್ಯನಾಗಿರುವುದರ ಅರ್ಥವೇನು? ಒಬ್ಬ ಮನುಷ್ಯನು ಪ್ರಪಂಚದ ಇತರ

ವಸ್ತುಗಳಂತೆ ಕೇವಲ ಒಂದು ವಸ್ತುವಾಗಿದ್ದಾನೆಯೇ? ವಿಜ್ಞಾನವು ಕಲ್ಪಿಸಿಕೊಳ್ಳುವಂತೆ (ವಸ್ತುನಿಷ್ಠವಾದಂಥದ್ದು, ವೀಕ್ಷಣೆಯ ಮೂಲಕ ನಿಯಮಗಳನ್ನು ಕಂಡುಕೊಳ್ಳುವ ಮಾರ್ಗ) ಅಲ್ಲಿ ವ್ಯಕ್ತಿನಿಷ್ಠವಾದದ್ದನ್ನು, ಅಂದರೆ ಮಾನವನ ಆಂತರಿಕ ಅನುಭವವನ್ನು ನಿಸರ್ಗದೊಳಗೆ ಸೇರಿಸುವ  ಪ್ರಕ್ರಿಯೆಗೆ ಯಾವುದೇ ಹಾದಿಯಿಲ್ಲವೆಂದು ತೋರುತ್ತದೆ.

ಯುದ್ಧಾನಂತರದ ರಾಜಕೀಯ ಸಂಸ್ಕೃತಿಯ ಬಗೆಗಿನ ಎಲ್ಲವೂ ಜಾನ್ ಮೇನಾರ್ಡ್ ಕೇನ್ಸ್‌ರ ಪರವಾಗಿತ್ತು ಮತ್ತು ಆರ್ಥಿಕ ವ್ಯವಸ್ಥೆಯ ನಿರ್ವಹಣೆಯಲ್ಲಿ ಸರ್ಕಾರದ ಪಾತ್ರವು ವಿಸ್ತೃತಗೊಂಡಿತು. ಆದರೆ ಯುದ್ಧಾನಂತರದ ಶೈಕ್ಷಣಿಕ ಸಂಸ್ಕೃತಿಯ ಬಗೆಗಿನ ಎಲ್ಲವೂ ಹಯಾಕ್‌ರವರ ದೊಡ್ಡ ವಿಚಾರದ ಪರವಾಗಿತ್ತು. ಯುದ್ಧಕ್ಕಿಂತ ಮೊದಲು, ಮಾರುಕಟ್ಟೆಯು ವಿರಳವಾದ ಸಂಪನ್ಮೂಲಗಳ ದಕ್ಷ ಹಂಚಿಕೆಯ ಒಂದು ಸೀಮಿತ ಸಾಧನವಾಗಿದೆ ಎಂದು ಬಲಪಂಥೀಯ <u>ಅರ್ಥಶಾಸ್ತ್ರಜ್ಞರು ಸಹಾ ಭಾವಿಸಿದ್ದರು.</u> ಆದರೆ 1700ರ ದಶಕದ ಆಡಂ ಸ್ಮಿತ್‌ರವರ ಕಾಲದಿಂದ ಹಿಡಿದು, ಯುದ್ಧಾನಂತರದ ಚಿಕಾಗೋ ಶಾಲೆಯ ಸಂಸ್ಥಾಪಕ ಸದಸ್ಯರವರೆಗೆ, ಸಮಾಜ ಮತ್ತು ಜೀವನದ ಅಂತಿಮ ಗುರಿಗಳು  ಆರ್ಥಿಕೇತರ ವಲಯದಲ್ಲಿ ಸ್ಥಾಪಿಸಲ್ಪಟ್ಟಿವೆ ಎಂಬ ನಂಬಿಕೆಯು ಸಾಮಾನ್ಯವಾಗಿತ್ತು.

ಈ ದೃಷ್ಟಿಕೋನದಲ್ಲಿ, ಮೌಲ್ಯದ ಪ್ರಶ್ನೆಗಳನ್ನು ಆರ್ಥಿಕವಾಗಿ ಅಲ್ಲದೆ, ರಾಜಕೀಯ ಮತ್ತು ಪ್ರಜಾಪ್ರಭುತ್ವದ ನೆಲೆಗಟ್ಟಿನಲ್ಲಿ –ನೈತಿಕ ಪ್ರತಿಫಲನ ಮತ್ತು ಸಾರ್ವಜನಿಕ ವಿವೇಚನೆಯ ಮೂಲಕ ಪರಿಹರಿಸಲಾಗುತ್ತದೆ. ಈ ನಂಬಿಕೆಯ ಆಧುನಿಕ ಅಭಿವ್ಯಕ್ತಿಯು 1922ರಲ್ಲಿ ಫ್ರಾಂಕ್ ನೈಟ್‌ರವರ *ಎಥಿಕ್ಸ್ ಅಂಡ್ ಇಕನಾಮಿಕ್ ಇಂಟರ್‌ಪ್ರಿಟೇಶನ್* ಎಂದು ಕರೆಯಲ್ಪಡುವ ಪ್ರಬಂಧದಲ್ಲಿ ವ್ಯಕ್ತವಾಗಿರುವುದು ಕಂಡು ಬರುತ್ತದೆ ಮತ್ತು ಫ್ರಾಂಕ್ ನೈಟ್  ಚಿಕಾಗೊ ನಗರಕ್ಕೆ ಹಯಾಕ್ ಬರುವ ಎರಡು ದಶಕಗಳ ಹಿಂದೆಯೇ ಬಂದಿದ್ದರು.  "ಮೌಲ್ಯಗಳ ತರ್ಕಬದ್ಧ ಆರ್ಥಿಕ ಟೀಕೆಯು ಸಾಮಾನ್ಯ ಜ್ಞಾನಕ್ಕೆ ವಿರುದ್ಧವಾದ ಫಲಿತಾಂಶವನ್ನು ನೀಡುತ್ತದೆ" ಎಂದು ಬರೆಯುವ ನೈಟ್ "ಆರ್ಥಿಕ ವ್ಯಕ್ತಿಯು ಸ್ವಾರ್ಥಿ, ನೈತಿಕ ಖಂಡನೆಯ ಕಠೋರ ವಸ್ತುವಾಗಿದ್ದಾನೆ" ಎಂದು ಹೇಳುತ್ತಾರೆ.

ಕೇವಲ ಸ್ವ–ಹಿತಾಸಕ್ತಿ  ಮತ್ತು ಲೆಕ್ಕಾಚಾರವನ್ನು ಮೀರಿ ವ್ಯಾಪಾರೀ  ಸಮಾಜವೊಂದು ನಿರ್ಮಾಣವಾಗಬೇಕಾದರೆ ಅದಕ್ಕೆ ಆಧಾರವಾಗಿರುವ ಮೌಲ್ಯಗಳನ್ನು ಹೇಗೆ ಸೇರಿಸಬೇಕೆಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಅರ್ಥವಿಜ್ಞಾನಿಗಳು ಸತತವಾಗಿ ಸುಮಾರು 200 ವರ್ಷಗಳಿಂದಲೂ ಪ್ರಯಾಸ ಪಡುತ್ತಿದ್ದಾರೆ. ನೈಟ್‌ರವರು ತಮ್ಮ ಸಹೋದ್ಯೋಗಿಗಳಾದ ಹೆನ್ರಿ ಸಿಮನ್ಸ್ ಮತ್ತು ಜಾಕೋಬ್ ವೈನರ್ ಅವರೊಂದಿಗೆ ಸೇರಿ ಫ್ರಾಂಕ್ಲಿನ್ ಡಿ. ರೂಸ್ವೆಲ್ಟ್ ಮತ್ತು ಹೊಸ ವ್ಯವಹಾರದ ಮಾರುಕಟ್ಟೆ ಮಧ್ಯಸ್ಥಿಕೆಗಳ ವಿರುದ್ಧ ಹಿಡಿತ ಸಾಧಿಸಿದರು, ಹಾಗೂ ಅವರು ಚಿಕಾಗೊ ವಿಶ್ವವಿದ್ಯಾಲಯವನ್ನು ಮುಕ್ತ ಮಾರುಕಟ್ಟೆಯ ಅರ್ಥಶಾಸ್ತ್ರದ ಪ್ರಬಲವಾದ ಬೌದ್ಧಿಕ ಮನೆಯನ್ನಾಗಿ ಸ್ಥಾಪಿಸಿದರು, ಅದು ಇಂದಿಗೂ ಹಾಗೆಯೇ ಉಳಿದಿರುವುದನ್ನು ನಾವು ನೋಡಬಹುದು. ಆದಾಗ್ಯೂ, ಸಿಮನ್ಸ್, ವೈನರ್ ಮತ್ತು ನೈಟ್ ಮೊದಲಾದವರು ತಮ್ಮ ವೃತ್ತಿ ಜೀವನವನ್ನು, ಪರಮಾಣು ಭೌತವಿಜ್ಞಾನಿಗಳು ಹೆಚ್ಚಿನ ಮೊತ್ತದ ಹಣವನ್ನು ವಿಶ್ವವಿದ್ಯಾನಿಲಯದ ವ್ಯವಸ್ಥೆಗೆ ಸೆಳೆಯುವ ಮುನ್ನ ಮತ್ತು ಯುದ್ಧಾನಂತರದ ಪ್ರಚಾರಕ್ಕೆ ತಂದ "ಕಠಿಣ"ವಿಜ್ಞಾನ ವಿಭಾಗವು ಆರಂಭವಾಗುವ ಮೊದಲೇ  ಪ್ರಾರಂಭಿಸಿದ್ದರು. ಅವರು ಯಾವುದೇ ಸಮೀಕರಣಗಳನ್ನು ಅಥವಾ ಮಾದರಿಗಳನ್ನು ಆರಾಧಿಸಲಿಲ್ಲ, ಇದಕ್ಕೆ ಬದಲಾಗಿ ಅವರು ವಿಜ್ಞಾನೇತ್ರ ಸಂಗತಿಗಳ ಬಗೆಗೆ, ಮುಖ್ಯವಾಗಿ ಮೌಲ್ಯದ ಪ್ರಶ್ನೆಗಳ ಬಗೆಗೆ ಚಿಂತಿಸುತ್ತಿದ್ದರು, ಅಲ್ಲಿ ಮೌಲ್ಯವು ಬೆಲೆಗಿಂತ ಸಂಪೂರ್ಣವಾಗಿ ಭಿನ್ನವಾಗಿತ್ತು.

ಇದರ ಅರ್ಥ ಸಿಮನ್ಸ್, ವೈನರ್ ಮತ್ತು ನೈಟ್‌ರವರು ಅನುಭವದಲ್ಲಿ ಹಯಾಕ್‌ರವರಿಗಿಂತ ಕಡಿಮೆ ಶಾಸ್ತ್ರಾಂಧರಾಗಿದ್ದರು ಎಂದಲ್ಲ ಅಥವಾ ಸರ್ಕಾರವು ತೆರಿಗೆ ಹಾಕುವುದನ್ನು ಮತ್ತು ಖರ್ಚು ಮಾಡುವುದನ್ನು ಕ್ಷಮಿಸಲು ಸಿದ್ಧರಿದ್ದರು ಎಂದಲ್ಲ. ಇಲ್ಲಿ ಹಯಾಕ್ ಬೌದ್ಧಿಕವಾಗಿ ತಮಗಿಂತ ಶ್ರೇಷ್ಠನೆಂಬುದೂ ಅವರ ಟೀಕೆಗೆ ಕಾರಣವಲ್ಲ. ಆದರೆ ಸಮಾಜವು ಕೇವಲ ಒಂದು ಮಾರುಕಟ್ಟೆಯಲ್ಲ ಮತ್ತು ಬೆಲೆಯು ಮೌಲ್ಯಕ್ಕೆ ಸಮನಾದುದಲ್ಲ ಎಂಬುದನನು ತಮ್ಮ ಆದ್ಯ ತತ್ವವೆಂದು ಅವರು ಒಪ್ಪಿಕೊಂಡರು. ಇದರ ಪರಿಣಾಮವಾಗಿ ಇತಿಹಾಸವು ಅವರನ್ನು ಇಡಿಯಾಗಿ ನುಂಗಿ ಹಾಕಿತು.

ಮಾನವರ ಪಕ್ಷಪಾತದ ಹತಾಶ ಸ್ಥಿತಿಯಿಂದ ವಿಜ್ಞಾನದ ಭವ್ಯವಾದ ವಸ್ತುನಿಷ್ಠತ್ತೆಯ ಕಡೆಗೆ ಹೇಗೆ ನಡೆಯಬೇಕು ಎಂಬುದನ್ನು ನಮಗೆ ತೋರಿಸಿಕೊಟ್ಟವರು ಹಯಾಕ್. ಹಯಾಕ್‌ರವರ ದೊಡ್ಡ ವಿಚಾರವು ನಮ್ಮ ವೈಯಕ್ತಿಕ ಮಾನವ ಸ್ವಭಾವ ಮತ್ತು ಸ್ವತಃ ನಿಸರ್ಗದ ನಡುವಿನ ಒಂದು ಕಳಚಿದ ಕೊಂಡಿಯ ಹಾಗೆ ಕೆಲಸಕ್ಕೆ ಬರುತ್ತದೆ. ಹಾಗೆ ಮಾಡುವಾಗ ಅವರು ಬೆಲೆ ಎಂದು ಅಭಿವ್ಯಕ್ತಿಸಲಾಗದ (ಮಾರುಕಟ್ಟೆಯ ತೀರ್ಪಿನಂತೆ) ಯಾವುದೇ ಮೌಲ್ಯವನ್ನೂ ಅಭಿಪ್ರಾಯ, ಆದ್ಯತೆ, ಜಾನಪದ ಅಥವಾ ಮೂಢನಂಬಿಕೆಯಂತಹ ಅಷ್ಟೇ ಖಚಿತವಲ್ಲದ ನೆಲೆಯಲ್ಲಿ ಇಡುತ್ತಾರೆ.

ಬೇರೆಯವರಿಗಿಂತ ಹೆಚ್ಚಿನದಾಗಿ ಸ್ವತಃ ಹಯಾಕ್‌ರವರಿಗೂ ಸಾಧ್ಯವಾಗದೆ ಹೋದದ್ದೇನೆಂದರೆ, ಸರ್ಕಾರಗಳು ಮತ್ತು ರಾಜಕಾರಣಿಗಳನ್ನು ಹಯಾಕ್‌ರವರ ದೊಡ್ಡ ವಿಚಾರದ ಶಕ್ತಿಗೆ ಪರಿವರ್ತಿಸುವುದು, ಮತ್ತು ಅದಕ್ಕೆ ನೆರವಾದವರು ಯುದ್ಧಾನಂತರದ ಹೊರಹೊಮ್ಮಿದ ಚಿಕಾಗೋ ಅರ್ಥಶಾಸ್ತ್ರಜ್ಞರಾದ ಮಿಲ್ಟನ್ ಫ್ರೀಡ್ಮನ್‌ರವರು. ಆದರೆ ಮೊದಲು ಅವರು ಹಿಂದೆ ಆಗಿ ಹೋದ ಎರಡು ಶತಮಾನಗಳ ವಿಚಾರಗಳನ್ನು ಮುರಿದರು ಮತ್ತು ಅರ್ಥಶಾಸ್ತ್ರವು "ಯಾವುದೇ ನಿರ್ದಿಷ್ಟ ನೈತಿಕ ಸ್ಥಾನಮಾನ ಅಥವಾ ಸಿದ್ಧರೂಢಿಯ ತೀರ್ಪುಗಳಿಂದ ತಾತ್ವಿಕವಾಗಿ ಸ್ವತಂತ್ರವಾಗಿದೆ" ಮತ್ತು "ಯಾವುದೇ ಭೌತಿಕ ವಿಜ್ಞಾನಗಳಂತೆಯೇ ನಿಖರವಾಗಿ ಅದೇ ಅರ್ಥದಲ್ಲಿ ಒಂದು ವಸ್ತುನಿಷ್ಠ ವಿಜ್ಞಾನವಾಗಿದೆ" ಎಂದು ಘೋಷಿಸಿದರು. ಹಳೆಯ, ಮಾನಸಿಕ ಮತ್ತು ಸಿದ್ಧರೂಢಿಯ ರೀತಿಯ ಮೌಲ್ಯಗಳು ದೋಷಯುಕ್ತವಾಗಿದ್ದವು. ಅವುಗಳು "ಅಂತಿಮವಾಗಿ ಮನುಷ್ಯರು ಹೋರಾಟವನ್ನೇ ಮಾಡಬೇಕಾಗುವ ರೀತಿಯ ಭಿನ್ನತೆಗಳಾಗಿದ್ದವು." ಅಲ್ಲಿ ಮಾರುಕಟ್ಟೆ ಇದೆ, ಬೇರೆ ರೀತಿಯಲ್ಲಿ ಹೇಳುವುದಾದರೆ ಅಲ್ಲಿ ಸಾಪೇಕ್ಷವಾದವಿದೆ.

ಮಾರುಕಟ್ಟೆಗಳು ನೈಸರ್ಗಿಕ ವ್ಯವಸ್ಥೆಗಳ ಮಾನವ ಪಡಿಯಚ್ಚುಗಳಾಗಿರಬಹುದು ಮತ್ತು ಬ್ರಹ್ಮಾಂಡದಂತೆಯೇ ಕರ್ತೃವಿಲ್ಲದೆ, ಮೌಲ್ಯರಹಿತವಾಹಿರಬಹುದು. ಆದರೆ ನಮ್ಮ ಜೀವನದ ಪ್ರತಿಯೊಂದಕ್ಕೂ ಹಯಾಕ್‌ರವರ ಮಹಾ ಕಲ್ಪನೆಯನ್ನು ಅನ್ವಯಿಸಿದರೆ ಅದು ನಮ್ಮ ವೈಶಿಷ್ಟ್ಯತೆಯನ್ನು ನಿರಾಕರಿಸುತ್ತದೆ. ಅಂದರೆ ಮನುಷ್ಯ ಜೀವಿಗಳಲ್ಲಿ ಇರುವ ಮನುಷ್ಯತ್ವದ ಅಂಶಗಳನ್ನು – ನಮ್ಮ ಮನಸ್ಸುಗಳು ಮತ್ತು ನಮ್ಮ ಆಲೋಚನೆಗಳನ್ನು – ಲೆಕ್ಕಾಚಾರದ ಕ್ರಮಾವಳಿಗಳಿಗೆ ಮತ್ತು ಮಾರುಕಟ್ಟೆಗಳಿಗೆ ವಹಿಸಿಕೊಡುತ್ತದೆ, ಜೊತೆಗೆ ಆರ್ಥಿಕ ಮಾದರಿಗಳ ದೆವ್ವರೂಪದ, ಕ್ಷೀಣಿಸಿದ ಆದರ್ಶೀಕರಣಗಳನ್ನು ನಾವು ಅನುಕರಣೆ ಮಾಡಲು ಬಿಟ್ಟುಬಿಡುತ್ತದೆ. ಹಯಾಕ್ ಕಲ್ಪನೆಯನ್ನು ದೊಡ್ಡದು ಮಾಡಿ ಬೆಲೆ ವ್ಯವಸ್ಥೆಯನ್ನು ಅಮೂಲಾಗ್ರವಾಗಿ ಸಾಮಾಜಿಕ ಸರ್ವಾಂತರ್ಯಾಮಿತ್ವಕ್ಕೆ ನವೀಕರಿಸುವುದೆಂದರೆ ನಮ್ಮ ಕ್ರಿಯೆಗಳ ಮತ್ತು ನಂಬಿಕೆಗಳಿಗಾಗಿ ಸಮರ್ಥನೆಗಳನ್ನು ಒದಗಿಸುವ ಮತ್ತು ಮೌಲ್ಯಮಾಪನ ಮಾಡುವ, ನಮ್ಮ ಸಾಮರ್ಥ್ಯಕ್ಕೆ ಕಾರಣವಾಗುವ ನಮ್ಮ ವೈಯಕ್ತಿಕ ಸಾಮರ್ಥ್ಯದ ಪ್ರಾಮುಖ್ಯತೆಯನ್ನು ತೀವ್ರವಾಗಿ ಕೆಳಗಿಳಿಸುವುದು ಎಂದರ್ಥ.

ಇದರ ಪರಿಣಾಮವಾಗಿ, ಸಾರ್ವಜನಿಕ ವಲಯದಲ್ಲಿ – ನಾವು ಯಾವ ಸ್ಥಳದಲ್ಲಿ ಕಾರಣಗಳನ್ನು ನೀಡುತ್ತಿದ್ದೇವೆಯೋ ಮತ್ತು ಇತರರ ಕಾರಣಗಳನ್ನು ವಿರೋಧಿಸುತ್ತೇವೆಯೋ – ಅಲ್ಲಿ ಯಾವುದೇ ವಿವೇಚನೆಗೆ ಸ್ಥಳಾವಕಾಶವಿಲ್ಲದಂತಾಗುತ್ತದೆ ಮತ್ತು ಅದು ಛಾಯಾಚಿತ್ರದಲ್ಲಿನ, ಸಾಮಾಜಿಕ ಜಾಲತಾಣದ ಲೈಕುಗಳಲ್ಲಿನ, ಮತ್ತು ರಿಟ್ವೀಟುಗಳಲ್ಲಿನ ಮಾರುಕಟ್ಟೆಯಾಗುತ್ತದೆ. ಅಂತರ್ಜಾಲವು ಲೆಕ್ಕಾಚಾರದ ಕ್ರಮಾವಳಿಗಳಿಂದ ವರ್ಧಿಸಲ್ಪಟ್ಟ ವೈಯಕ್ತಿಕ ಆದ್ಯತೆಯಾಗಿದೆ; ಈಗಾಗಲೇ ನಮ್ಮ ತಲೆಯಲ್ಲಿರುವ ದ್ವನಿಯನ್ನು ಪ್ರತಿಧ್ವನಿಸುವ ಒಂದು ಹುಸಿ ಸಾರ್ವಜನಿಕ ಸ್ಥಳವಾಗಿದೆ. ಒಂದು ಸಮಾಜವಾಗಿ ಒಮ್ಮತದ ಕಡೆಗೆ ನಮ್ಮನ್ನು ಒಯ್ಯುವ ಚರ್ಚೆಗಳ ಸ್ಥಳವಾಗುವುದಕ್ಕೆ ಬದಲಾಗಿ, ಅಲ್ಲಿ ಈಗ "ವಿಚಾರಗಳ ಮಾರುಕಟ್ಟೆ" ಎಂದು ಕರೆಯಲ್ಪಡುವ ಪರಸ್ಪರ–ದೃಢೀಕರಣದ ಸಲಕರಣೆಗಳಿವೆ. ಯಾವುದು ಸಾರ್ವಜನಿಕ ಮತ್ತು ತಿಳಿಯಾದದ್ದು ಎಂದು ಅನಿಸುತ್ತದೆಯೋ ಅದು ಮೊದಲೇ ಅಸ್ತಿತ್ವದಲ್ಲಿರುವ ಅಭಿಪ್ರಾಯಗಳು, ಪೂರ್ವಾಗ್ರಹಗಳು ಮತ್ತು ನಂಬಿಕೆಗಳ ವಿಸ್ತರಣೆ ಮಾತ್ರ ಆಗಿದೆ, ಹಾಗೆಯೇ ದೊಡ್ಡ ದತ್ತಾಂಶದ ಒಟ್ಟು ತರ್ಕದ ಮೂಲಕ ಸಂಸ್ಥೆಗಳ ಮತ್ತು ತಜ್ಞರ ಅಧಿಕಾರವನ್ನು ಸ್ಥಳಾಂತರಿಸಲಾಗಿದೆ. ಯಾವಾಗ ನಾವು ಹುಡುಕಾಟದ ಯಂತ್ರದ ಮೂಲಕ ಜಗತ್ತನ್ನು ಪ್ರವೇಶಿಸುತ್ತೇವೆಯೋ, ಆಗ ಅದರ ಫಲಿತಾಂಶಗಳು ಗೂಗಲ್‌ನ ಸಂಸ್ಥಾಪಕರು ಹೇಳುವಂತೆ "ಪುನರಾವರ್ತಕವಾಗಿ"– ನಿರಂತರವಾಗಿ ಒಂದು ಮಾರುಕಟ್ಟೆಯಂತೆ ವಾಸ್ತವದಲ್ಲಿ ಕಾರ್ಯ ನಿರ್ವಹಿಸುವ ಅಂತ್ಯವೇ ಇಲ್ಲದ ಪ್ರತ್ಯೇಕ ಬಳಕೆದಾರರಿಂದ ಶ್ರೇಣಿಗಳಲ್ಲಿ ವರ್ಗೀಕರಿಸಲ್ಪಡುತ್ತವೆ.

ಡಿಜಿಟಲ್ ತಂತ್ರಜ್ಞಾನದ ಅದ್ಭುತವಾದ ಉಪಯುಕ್ತತೆಗಳನ್ನು ಹೊರತುಪಡಿಸಿ, ಹಿಂದಿನ ಮತ್ತು ಹೆಚ್ಚು ಮಾನವತವಾದಿ ಸಂಪ್ರದಾಯವು ಶತಮಾನಗಳವರೆಗೆ ಪ್ರಬಲವಾಗಿತ್ತು. ಅದು ಯಾವಾಗಲೂ ನಮ್ಮ ಅಭಿರುಚಿ ಮತ್ತು ಆದ್ಯತೆಗಳ ನಡುವೆ ಇರುವ ಭಿನ್ನತೆಯನ್ನು ಗುರುತಿಸುತ್ತಿತ್ತು. ಮಾರುಕಟ್ಟೆಯಲ್ಲಿ ವ್ಯಕ್ತವಾಗುವ ಬಯಕೆಗಳು ಮತ್ತು ಆ ಆದ್ಯತೆಗಳ ಮೇಲೆ ಯೋಚನೆ ಮಾಡಬಲ್ಲ ನಮ್ಮ ಸಾಮರ್ಥ್ಯದ ನಡುವಿನ ಭಿನ್ನತೆಯನ್ನು ಗುರುತಿಸುತ್ತಿತ್ತು. ಅದು ಮೌಲ್ಯಗಳನ್ನು ರೂಪಿಸಿಕೊಳ್ಳಲು ಮತ್ತು ವ್ಯಕ್ತಪಡಿಸಲು ನಮಗೆ ಅವಕಾಶ ಕಲ್ಪಿಸುತ್ತಿತ್ತು.

"ಅಭಿರುಚಿಯೆಂದರೆ ನೀವು ವಾದಿಸದೇ ಇರುವ ಆದ್ಯತೆಯೆಂದು ಬಹುತೇಕವಾಗಿ ವ್ಯಾಖ್ಯಾನಿಸಲ್ಪಟ್ಟಿದೆ" ಎಂದು ತತ್ವಶಾಸ್ತ್ರಜ್ಞ ಮತ್ತು ಅರ್ಥಶಾಸ್ತ್ರಜ್ಞರಾದ ಆಲ್ಬರ್ಟ್.ಜೆ. ಹರ್ಷ್ಮನ್‌ರವರು ಒಮ್ಮೆ ಬರೆದಿದ್ದರು. ಅವರು ಮುಂದುವರಿದು "ನೀವು ಇತರರು ಅಥವಾ ನಿಮ್ಮೊಂದಿಗೇ ವಾದಿಸುವ ಅಭಿರುಚಿಯು ಅಭಿರುಚಿಯಾಗಿ ಉಳಿಯುವುದಿಲ್ಲ – ಮೌಲ್ಯವಾಗಿ ಬದಲಾಗುತ್ತದೆ" ಎಂದು ಹೇಳಿದ್ದಾರೆ.

ಹರ್ಷ್ಮನ್‌ರವರು ಒಬ್ಬ ವ್ಯಕ್ತಿಯ ಒಂದು ಭಾಗವು ಗ್ರಾಹಕನಾಗಿಯೂ ಮತ್ತು ಇನ್ನೊಂದು ಭಾಗವು ಕಾರಣಗಳ ಪೂರೈಕೆದಾರನಾಗಿಯೂ ಇರುವುದರ ನಡುವಿನ ವ್ಯತ್ಯಾಸವನ್ನು ಗುರುತಿಸಿದ್ದಾರೆ. ಹರ್ಷ್ಮನ್ ಕರೆದಿರುವಂತೆ "ಸರಕು ಮತ್ತು ಸೇವೆಗಳನ್ನು ಖರೀದಿಸುವ ಏಜೆಂಟರಿಂದ ಅಭಿವ್ಯಕ್ತಿಸಲ್ಪಟ್ಟ" ಆದ್ಯತೆಗಳನ್ನು ಮಾರುಕಟ್ಟೆಯು ಪ್ರತಿಬಿಂಬಿಸುತ್ತದೆ. ಆದರೆ ಅವರು ಹೇಳಿದಂತೆ, ಪುರುಷರು ಮತ್ತು ಮಹಿಳೆಯರು ಕೂಡ "ತಾವು ಅಭಿವ್ಯಕ್ತಗೊಳಿಸುವ ಬಯಕೆಗಳು, ಆಯ್ಕೆಗಳು ಮತ್ತು ಆದ್ಯತೆಗಳಿಂದ ಹಿಂದೆ ಸರಿಯುವ ಸಾಮರ್ಥ್ಯವನ್ನು ಹೊಂದಿದ್ದಾರೆ. ಒಂದು ವೇಳೆ ಅವರು ನಿಜವಾಗಿ ತಾವು ಈ ಬಯಕೆಗಳನ್ನು ಬಯಸುತ್ತೇವೆಯೇ ಮತ್ತು ಈ ಆದ್ಯತೆಗಳ ಕಡೆ ಒಲವು ತೋರುತ್ತೇವೆಯೇ ಎಂಬುದರ ಬಗ್ಗೆ ತಮ್ಮನ್ನೆ ತಾವು ಪ್ರಶ್ನಿಸಿಕೊಳ್ಳುತ್ತಾರೆ." ಹೀಗೆ ಚಿಂತಿಸುವ ಸಾಮರ್ಥ್ಯದ ಆಧಾರದ ಮೇಲೆ ನಾವು ನಮ್ಮ ಅಸ್ತಿತ್ವ ಮತ್ತು ಗುರುತುಗಳಿಗೆ ಒಂದು ಸ್ಪಷ್ಟವಾದ ರೂಪವನ್ನು ಕೊಡುತ್ತೇವೆ. ಒಬ್ಬ ವ್ಯಕ್ತಿಯ ವ್ಯಕ್ತಿಗತ ಚಿಂತನಾ ಶಕ್ತಿಯ ಬಳಕೆಯನ್ನು ತರ್ಕವೆನ್ನಲಾಗುತ್ತದೆ; ಈ

ಚಿಂತನಾ ಶಕ್ತಿಗಳ  ಸಾಮೂಹಿಕ ಬಳಕೆಯು ಸಾರ್ವಜನಿಕ ತರ್ಕವೆನ್ನಿಸಿಕೊಳ್ಳುತ್ತದೆ. ಕಾನೂನು ಮತ್ತು ನೀತಿಯನ್ನು ಮಾಡಲು ಸಾರ್ವಜನಿಕ ತರ್ಕವನ್ನು ಬಳಸುವುದು ಪ್ರಜಾಪ್ರಭುತ್ವವಾಗಿದೆ. ನಾವು ನಮ್ಮ ಕ್ರಿಯೆಗಳಿಗೆ ಮತ್ತು ನಂಬಿಕೆಗಳಿಗೆ ಕಾರಣಗಳನ್ನು ನೀಡುವಾಗ, ನಾವು ನಮ್ಮನ್ನು ಜೀವಂತವಾಗಿಡುತ್ತೇವೆ: ಇದು ವ್ಯಕ್ತಿಗತ ಸ್ತರದಲ್ಲಿಯೂ ಹೌದು ಮತ್ತು ಸಾಮೂಹಿಕ ಸ್ತರದಲ್ಲಿಯೂ  ಹೌದು, ನಾವು ಯಾರು ಮತ್ತು ಏನು ಎಂಬುದನ್ನು ನಾವೇ ನಿರ್ಧರಿಸುತ್ತೇವೆ.

ಹಯಾಕ್‌ರವರ ಮಹಾ ಕಲ್ಪನೆಯ ತರ್ಕದ ಪ್ರಕಾರ, ಮಾನವ ವ್ಯಕ್ತಿತ್ವದ ಈ ಅಭಿವ್ಯಕ್ತಿಗಳು ಮಾರುಕಟ್ಟೆಯ ಅನುಮೋದನೆ ಇಲ್ಲದೆ ಹೋದರೆ ಸಹಜವಾಗಿ ಅರ್ಥಹೀನವಾಗುತ್ತವೆ.  ಮಿಲ್ಟನ್ ಫ್ರೀಡ್ಮನ್ ಹೇಳುವಂತೆ ಅವು ಕೇವಲ ಸಾಪೇಕ್ಷವಾದವಾಗಿವೆ, ಪ್ರತಿಯೊಂದೂ ಮತ್ತೊಂದರ ಹಾಗೆ.  ಯಾವಾಗ ವಸ್ತುನಿಷ್ಠ ಸತ್ಯ ಮಾತ್ರ ಮಾರುಕಟ್ಟೆಯಿಂದ ನಿರ್ಧರಿಸಲ್ಪಡುತ್ತದೆಯೋ, ಆಗ ಎಲ್ಲ ಇತರ ಮೌಲ್ಯಗಳು ಕೇವಲ ಅಭಿಪ್ರಾಯಗಳಾಗಿ ಬಿಡುತ್ತವೆ; ಮಿಕ್ಕೆಲ್ಲವೂ  ಒಂದು ರೀತಿಯ ಸಾಪೇಕ್ಷತಾ ಬಿಸಿಗಾಳಿಯಂತಾಗುತ್ತವೆ. ಆದರೆ ಫ್ರೀಡ್ಮನ್‌ರವರ "ಸಾಪೇಕ್ಷತಾವಾದ"ವು ಮಾನವ ತರ್ಕವನ್ನು ಆಧರಿಸಿದ ಯಾವುದೇ ಹೇಳಿಕೆಯ ಮೇಲೆ ಎಸೆಯಲ್ಪಟ್ಟ ಆರೋಪವಾಗಿದೆ. ಇದು ಅಸಂಬದ್ಧ ಅವಮಾನವಾಗಿದೆ, ಏಕೆಂದರೆ ಎಲ್ಲಾ ಮಾನವ ಹುಡುಕಾಟಗಳೂ "ಸಾಪೇಕ್ಷ" ಅವು ವಿಜ್ಞಾನದ ರೀತಿಯಲ್ಲಿ ಇರುವುದಿಲ್ಲ. ಅವು ಒಂದು ಮನಸ್ಸನ್ನು ಹೊಂದಿರುವ ಸ್ಥಿತಿಗೆ (ಖಾಸಗಿ) ಮತ್ತು ವೈಜ್ಞಾನಿಕ ಪುರಾವೆಗಳನ್ನು ನಾವು ನಿರೀಕ್ಷಿಸಲಾಗದ ಸಂದರ್ಭದಲ್ಲಿಯೂ ಕೂಡಾ ತರ್ಕಿಸುವ ಮತ್ತು ಅರ್ಥ ಮಾಡಿಕೊಳ್ಳುವ (ಸಾರ್ವಜನಿಕ) ಅಗತ್ಯಕ್ಕೆ ಸಂಬಂಧಿಸಿವೆ. ನಮ್ಮ ಚರ್ಚೆಗಳು ಸಕಾರಣ ವಿವೇಚನೆಯ ಮೂಲಕ ಪರಿಹರಿಸಲ್ಪಡದೇ ಇರುವಾಗ ಅಧಿಕಾರದ ಹುಚ್ಚಾಟಿಕೆಗಳು ಫಲಿತಾಂಶವನ್ನು ನಿರ್ಧರಿಸುತ್ತವೆ.

ಇಲ್ಲಿ ನವ–ಉದಾರೀಕರಣದ ವಿಜಯವು ಈಗ ನಾವು ಜೀವಿಸುತ್ತಿರುವ ರಾಜಕೀಯ ದುಃಸ್ವಪ್ನವನ್ನು ಕೂಡಿಕೊಳ್ಳುತ್ತದೆ. "ನಿನ್ನ ಹತ್ತಿರ ಇದ್ದದ್ದು ಒಂದೇ ಕೆಲಸ"*** ಎಂಬ ಹಳೆಯ ತಮಾಶೆಯ ಮಾತೊಂದಿದೆ, ಹಯಾಕ್‌ರವರ ಮೂಲತಃ 30 ಮತ್ತು 40ರ ದಶಕಗಳಲ್ಲಿ ಕಲ್ಪಿಸಿಕೊಂಡಿದ್ದ ಮಹಾ ಯೋಜನೆಯನ್ನು  ರಾಜಕೀಯ ಗೊಂದಲ ಮತ್ತು ನಿರಂಕುಶವಾದದ ಕೆಟ್ಟ ಸ್ಥಿತಿಗೆ ಮರಳದಂತೆ ತಡೆಯಲು ಸ್ಪಷ್ಟವಾಗಿ ವಿನ್ಯಾಸಗೊಳಿಸಲಾಗಿತ್ತು. ಆದರೆ ಮಹಾ ವಿಚಾರವು ಯಾವತ್ತಾದರೂ ಸಂಭವಿಸಬಹುದು ಎಂದುಕೊಂಡ ದುಸ್ವಪ್ನವಾಗಿತ್ತು. ಇದು ಆರಂಭದಿಂದಲೇ ಅದು ಯಾವುದರ ವಿರುದ್ಧ ನಮ್ಮನ್ನು ರಕ್ಷಿಸುತ್ತದೆ ಎಂದುಕೊಳ್ಳಲಾಗಿತ್ತೋ ಅದನ್ನು ಗರ್ಭದಲ್ಲಿಟ್ಟುಕೊಂಡಿತ್ತು. ಒಂದು ದೈತ್ಯ ಮಾರುಕಟ್ಟೆಯೆಂದು ಪರಿಗಣಿಸಲ್ಪಟ್ಟ ಸಮಾಜವು ಕೇವಲ ಅಭಿಪ್ರಾಯಗಳ ಆಧಾರದ ಮೇಲೆ ಜಗಳವಾಡುವ ಸಾರ್ವಜನಿಕ ಜೀವನಕ್ಕೆ ದಾರಿ ಮಾಡಿಕೊಡುತ್ತದೆ, ಅಂತಿಮವಾಗಿ, ಸಮಾಜವು ಹತಾಶೆಯಲ್ಲಿ ತನ್ನ ಜಟಿಲ ಸಮಸ್ಯೆಗಳನ್ನು ಬಗೆಹರಿಸುವ ಕೊನೆಯ ತಾಣವಾಗಿ ಬಲಿಷ್ಟ ವ್ಯಕ್ತಿಯೊಬ್ಬನತ್ತ  ಮುಖ ಮಾಡುವ ತನಕ ಅದು ಉಳಿಯುತ್ತದೆ.

[*** ಇದ್ದ ಒಂದು ಕೆಲಸವನ್ನೂ ಮಾಡಲಾಗಲಿಲ್ಲ ಎಂಬ ಅರ್ಥದ ಆಂಗ್ಲ ನುಡಿಗಟ್ಟು]

1989ರ ವರ್ಷದಲ್ಲಿ ಹಯಾಕ್‌ರವರು ಪಶ್ಚಿಮ ಜರ್ಮನಿಯ ಪ್ರೈಬರ್ಗ್ಸ್‌ನಲ್ಲಿ ಉರಾಕ್ಸ್ರಾಸ್ಸ್ ಎಂಬ ಗಲ್ಲಿಯಲ್ಲಿದ್ದ ಅಪಾರ್ಟ್ಮೆಂಟ್‌ನಲ್ಲಿ ಇರುವ ಮೂರನೇ ಮಹಡಿಯ ಕೊಠಡಿಯೊಂದರಲ್ಲಿ ವಾಸಿಸುತ್ತಿದ್ದರು.  ಆ ಕೊಠಡಿಯ ಬಾಗಿಲು ಸುಮಾರು 90 ವರ್ಷಗಳಷ್ಟು ಹಳೆಯದಾಗಿತ್ತು. ಒಂದು ದಿನ ಹಯಾಕ್‌ರವರನ್ನು ನೋಡಲು ಬಂದ  ಅಮೇರಿಕಾದ ವರದಿಗಾರನೊಬ್ಬ ಅವರ ಕೊಠಡಿಯ ಬಾಗಿಲಿನ ಮೇಲೆ ಬಡಿದನು. ಸೂರ್ಯನ ಬೆಳಕಿದ್ದ ಕೊಠಡಿಯ ಕಿಡಕಿಯೊಂದ

ಹೊರಗಿರುವ ಪರ್ವತಗಳನ್ನು ನೋಡಬಹುದಿತ್ತು. ಅವರಿಬ್ಬರೂ ಮಾತನಾಡತೊಡಗಿದರು. ಆಗತಾನೇ ನ್ಯೂಮೋನಿಯಾದಿಂದ ಚೇತರಿಸಿಕೊಳ್ಳುತ್ತಿದ್ದ ಹಯಾಕ್ ತಮ್ಮ ಕಾಲುಗಳ ಮೇಲೆ ಕಂಬಳಿಯನ್ನು ಎಳೆದುಕೊಂಡರು.

ಈಗಿನ ಹಯಾಕ್ ಒಂದು ಕಾಲಕ್ಕೆ ಕೇನ್ಸ್‌ರವರರಿಂದ ಸೋಲನ್ನು ಅನುಭವಿಸಿ ಚಡಪಡಿಸಿದ್ದ ಹಯಾಕ್ ಆಗಿರಲಿಲ್ಲ. ಮಾರ್ಗರೇಟ್ ಥ್ಯಾಚರ್ ಅವರು ಸಹಸ್ರ ವರ್ಷದ ವಿಜಯೋತ್ಸವದ ಸಮಯದಲ್ಲಿ ಹಯಾಕ್‌ರವರಿಗೆ ಪತ್ರ ಬರೆದಿದ್ದರು, ತಮ್ಮ ಮತ್ತು ರೇಗನ್‌ರವರ ಯಾವ ಸಾಧನೆಯೂ "ನಮ್ಮನ್ನು ಸರಿಯಾದ ಮಾರ್ಗಕ್ಕೆ ಹಚ್ಚಿದ, ಸರಿಯಾದ ಮಾರ್ಗದರ್ಶನಗಳನ್ನು ನೀಡಿದ ಮೌಲ್ಯಗಳು ಮತ್ತು ನಂಬಿಕೆಗಳಿಲ್ಲದಿದ್ದರೆ ಪೂರ್ಣಗೊಳ್ಳುತ್ತಿರಲಿಲ್ಲ" ಎಂದು. ಹಯಾಕ್ ಈಗ ತಮ್ಮದೇ ಆದ ಲೆಕ್ಕಚಾರದಲ್ಲಿ ಹರ್ಷಚಿತ್ತರಾಗಿದ್ದರಲ್ಲದೆ, ಬಂಡವಾಳಶಾಹಿಯ ಭವಿಷ್ಯದ ಬಗ್ಗೆ ಆಶಾವಾದಿಯಾಗಿದ್ದರು. ಅಮೆರಿಕಾದ ಪತ್ರಕರ್ತ ಬರೆದಿರುವಂತೆ "ವಿಶೇಷವಾಗಿ ಈಗಿನ ಯುವ ಪೀಳಿಗೆಯು ಮಾರುಕಟ್ಟೆಯ ಬಗ್ಗೆ ಹೆಚ್ಚು ಮೆಚ್ಚುಗೆಯನ್ನು ಹೊಂದಿದೆ ಎಂದು ಹಯಾಕ್‌ರವರಿಗೆ ಅನಿಸುತ್ತದೆ. ಇಂದು ನಿರುದ್ಯೋಗಿ ಯುವಕರು ಅಲ್ಜೆಯರ್ಸ್ ಮತ್ತು ರಂಗೂನ್ ಗಲಭೆಯಲ್ಲಿ ಭಾಗವಹಿಸಿದ್ದು ಕೇಂದ್ರೀಯ ಯೋಜಿತ ಕಲ್ಯಾಣ ರಾಜ್ಯಕ್ಕಾಗಿ ಅಲ್ಲ, ಆದರೆ ಅವಕಾಶಕ್ಕಾಗಿ; ಯಾವುದೇ ಮಾರುಕಟ್ಟೆಯಲ್ಲಿ, ಯಾವುದೇ ಬೆಲೆಯಲ್ಲಿ ಜೀನ್ಸ್ ಮತ್ತು ಕಾರುಗಳನ್ನು ಕೊಳ್ಳುವ ಮತ್ತು ಮಾರುವ ಸ್ವಾತಂತ್ರವನ್ನು ಕೇಳುವುದಾಗಿತ್ತು".

ಮೂವತ್ತು ವರ್ಷಗಳ ನಂತರದ ಹಯಾಕ್‌ರವರ ಸಾಧನೆಯು ಅಪ್ರತಿಮವಾಗಿದೆ ಎಂದು ಹೇಳಬಹುದು. ಏಕೆಂದರೆ ಅವರ ಮಹಾ ವಿಚಾರದಿಂದ ನಿರ್ಮಿಸಲ್ಪಟ್ಟ ಸ್ವರ್ಗದಲ್ಲಿ ನಾವು ಇಂದು ವಾಸಿಸುತ್ತಿದ್ದೇವೆ. ಪರಿಪೂರ್ಣ ಸ್ಪರ್ಧೆಯಿಂದ ಮಾತ್ರ ಆಳಲ್ಪಡುವ ಒಂದು ಆದರ್ಶ ಮಾರುಕಟ್ಟೆಯನ್ನು ಹೋಲುವಂತಹ ಪ್ರಪಂಚವನ್ನು ಹೆಚ್ಚು ನಿಕಟವಾಗಿ ರೂಪಿಸಿದಂತೆ, ಮಾನವ ನಡುವಳಿಕೆಯು ಒಟ್ಟಾರೆಯಾಗಿ ಕಾನೂನು ತರಹದ ಮತ್ತು ವೈಜ್ಞಾನಿಕ ರೀತಿಯ ನಡವಳಿಕೆಯಾಗುತ್ತ ಹೋಗುತ್ತದೆ. ಪ್ರತಿದಿನ ನಾವು ನಮ್ಮಷ್ಟಕ್ಕೇ (ನಮಗೆ ಯಾರೂ ಹೇಳುವುದು ಬೇಡ!) ಎಲ್ಲಾ ಕಡೆ ಹರಡಿಕೊಂಡ, ಪ್ರತ್ಯೇಕ, ಅನಾಮಧೇಯ ಖರೀದಿದಾರರು ಮತ್ತು ಮಾರಾಟಗಾರರಂತೆಯೇ ಆಗಲು ಪ್ರಯತ್ನಿಸುತ್ತೇವೆ; ಮತ್ತು ಪ್ರತಿದಿನ ನಮ್ಮಲ್ಲಿ ಉಳಿದುಕೊಂಡ ಬಯಕೆಗಳನ್ನು ಒಬ್ಬ ಗ್ರಾಹಕನಂತೆ ಹಿಂದಣದರ ಭಾವುಕ ನೆನಪಿಗಿಂತ ಹೆಚ್ಚಿನ ಇನ್ನೇನೋ ಅಥವಾ ಗಣ್ಯಪ್ರಜ್ಞೆಗಿಂತಲೂ ಹೆಚ್ಚಿನ ಇನ್ನೇನೋ ಎಂಬಂತೆ ನೋಡುತ್ತೇವೆ.

ಯಾವುದು, ಬೌದ್ಧಿಕ ಅಧಿಕಾರದ ಒಂದು ಹೊಸ ರೂಪವಾಗಿ ಪ್ರಾರಂಭವಾಯಿತೋ, ಅದು, ಒಂದು ತಟಸ್ಥ ರಾಜಕೀಯದ ಲೋಕದೃಷ್ಟಿಯಲ್ಲಿ ಬೇರೂರಿ ತೀವ್ರವಾದ ಪ್ರತಿಗಾಮಿಯಾಗಿ ಸುಲಭವಾಗಿ ರಾಜಕೀಯವನ್ನು ಪ್ರವೇಶಿಸಿತು. ಯಾವುದನ್ನು ಮಾಪನ ಮಾಡಲು ಸಾಧ್ಯವಿಲ್ಲವೋ ಅದು ನೈಜವಾಗಿರುವುದಿಲ್ಲ ಎಂದು ಅರ್ಥಶಾಸ್ತ್ರಜ್ಞ ಹೇಳುತ್ತಾನೆ, ಮತ್ತು ಜ್ಞಾನೋದಯದ ಪ್ರಮುಖ ನಂಬಿಕೆಗಳ ಲಾಭಗಳನ್ನು ನೀವು ಹೇಗೆ ಮಾಪನ ಮಾಡುತ್ತೀರಿ? ಉದಾಹರಣೆಗೆ, ವಿಮರ್ಶಾತ್ಮಕ ತರ್ಕ, ವೈಯಕ್ತಿಕ ಸ್ವಾಯತ್ತತೆ ಮತ್ತು ಪ್ರಜಾಪ್ರಭುತ್ವದ ಸ್ವಯಂ ಸರ್ಕಾರ. ಸತ್ಯದ ರೂಪವಾಗಿರುವ ತರ್ಕವನ್ನು ಅದರ ವ್ಯಕ್ತಿನಿಷ್ಠತೆಯ ಮಜುಗರದ ಅವಶೇಷದ ಸಲುವಾಗಿ ತೊರೆದು ಮತ್ತು ವಿಜ್ಞಾನವನ್ನು ನೈಜ ಮತ್ತು ಸತ್ಯಗಳೆರಡರ ಏಕೈಕ ತೀರ್ಪುಗಾರನನ್ನಾಗಿ ಮಾಡಿ ಶೂನ್ಯವೊಂದನ್ನು ಸೃಷ್ಟಿಸಿ ಅದರ ಜಾಗವನ್ನು ಹುಸಿ ವಿಜ್ಞಾನವು ಹೆಚ್ಚು ಖುಷಿಯಿಂದ ತುಂಬುವಂತೆ ಮಾಡಿದ್ದೇವೆ.

ಪ್ರಾಧ್ಯಾಪಕರ, ಸುಧಾರಕರ, ಶಾಸಕರ ಅಥವಾ ನ್ಯಾಯಾಧೀಶರ ಅಧಿಕಾರವು ಮಾರುಕಟ್ಟೆಯಿಂದ ಹುಟ್ಟಿಕೊಳ್ಳುವುದಿಲ್ಲ. ಅದಕ್ಕೆ ಬದಲಾಗಿ ಅದು ಸಾರ್ವಜನಿಕ ಚೈತನ್ಯ, ಮನಸ್ಸಾಕ್ಷಿ ಅಥವಾ ನ್ಯಾಯಕ್ಕಾಗಿ ಹಾತೊರೆಯುವಂತಹ ಮಾನವೀಯ

ಮೌಲ್ಯಗಳಿಂದ ಹುಟ್ಟಿಕೊಳ್ಳುತ್ತದೆ. ಟ್ರಂಪ್ ಆಡಳಿತವು ಇವುಗಳನ್ನು ಅವಹೇಳನಕಾರಿಯಾಗಿ ನೋಡಲು ಆರಂಭಿಸುವ ಬಹು ಮುಂಚೆಯೇ, ಆ ಮೌಲ್ಯಗಳು ಅವುಗಳನ್ನು ವಿವರಿಸಲಾಗದ ಒಂದು  ವಿವರಣಾತ್ಮಕ ಯೋಜನೆಯಿಂದ ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಂಡಿದ್ದವು. ಖಂಡಿತವಾಗಿ ಅಂತಹ ಮೌಲ್ಯಗಳ ಮೇಲೆ ಬೆಳೆಯುತ್ತಿರುವ ಅಸಡ್ಡೆಗೂ ಟ್ರಂಪ್‌ರವರ ಚುನಾವಣೆಗೂ ಸಂಬಂಧವಿರುವುದು ಗೋಚರಿಸುತ್ತದೆ.  ತತ್ವಗಳು ಅಥವಾ ನಂಬಿಕೆಗಳು ಇರದ ಶುದ್ಧ ಹುಚ್ಚಾಟದ ವ್ಯಕ್ತಿ. ಇಡೀ ಜಗತ್ತನ್ನು ಈಗ ಒಬ್ಬ ಬುದ್ದಿಹೀನ, ಸಂಪೂರ್ಣ ಅವಿವೇಕಿಯೊಬ್ಬ  ಆಳುತ್ತಿದ್ದಾನೆ. ಆದರೆ ಮ್ಯಾನ್ಹ್ಯಾಟನ್ ರಿಯಲ್ ಎಸ್ಟೇಟ್‌ನ ಬುದ್ದಿವಂತನಾಗಿ ಟ್ರಂಪ್ ಅವರಿಗೆ ಖಂಡಿತ ಗೊತ್ತಿದೆ: ತಮ್ಮ ಪಾಪಗಳು ಮಾರುಕಟ್ಟೆಯಲ್ಲಿ ಇನ್ನೂ ಶಿಕ್ಷೆಗೆ ಒಳಗಾಗಬೇಕಾಗಿದೆ.